**93**

# ದಿನದ ಇತಿಹಾಸದಲ್ಲಿ ಮೂರು ಮುಖ್ಯಾಂಶಗಳು

## ಓದುವ ಮನೆಪಾಠ #41

VII. ಯೇಸುವಿನ ಸೇವೆಯ ಅಂತಿಮ ವಾರ (ಮುಂದುವರೆಯುವದು).
 H. ಶುಕ್ರವಾರ: ಯೇಸುವಿನ ಮರಣದ ದಿನ (ಮುಂದುವರೆಯುವದು).
 10. ಯೇಸುವಿನ ದೇಹದ ಸಮಾದಿ.
 a. ಆತನ ಮರಣದ ವೀಕ್ಷಣೆ (ಮತ್ತಾಯ 27:55, 56; ಮಾರ್ಕ 15:40, 41; ಲೂಕ 23:49).
 b. ಆತನ ಮರಣದ ಸಾಕ್ಷೀತು (ಯೋಹಾನ 19:31-37).
 c. ಆತನ ದೇಹದ ಸಮಾಧಿ (ಮತ್ತಾಯ 27:57-60; ಮಾರ್ಕ 15:42-46; ಲೂಕ 23:50-54; ಯೋಹಾನ 19:38-42).
 d. ಆತನ ಸಮಾಧಿಯ ವೀಕ್ಷಣೆ (ಮತ್ತಾಯ 27:61; ಮಾರ್ಕ 15:47; ಲೂಕ 23:55, 56ಎ).
 I. ಶನಿವಾರ: ಆತನ ಮರಣದ ಮರುದಿನ.
 1. ಭಯಗೊಂಡ: ಆತನ ಶಿಷ್ಯರು (ಲೂಕ 23:56ಬಿ; ನೋಡಿ ಯೋಹಾನ 20:19ಎ).
 2. ಆತನ ವೈರಿಗಳ: ಭಯ (ಮತ್ತಾಯ 27:62-66).

VIII. ಯೇಸುವಿನ ಪುನರುತ್ಥಾನ, ಕಾಣಿಸುವಿಕೆ, ಆರೋಹಣ.
 A. ಭಾನುವಾರ: ಪುನರುತ್ಥಾನ ಹೊಂದಿದ ದಿವಸ.
 1. ಖಾಲಿಯಾದ ಸಮಾದಿ.
 a. ಖಾಲಿಯಾದ ಸಮಾದಿ ಹಾಗೂ ಸ್ತ್ರೀ (ಮತ್ತಾಯ 28:1-8; ಮಾರ್ಕ 16:1-9; ಲೂಕ 24:1-11; ನೋಡಿ ಲೂಕ 24:22-24; ಯೋಹಾನ 20:1).

## ಪೀಠಿಕೆ

ಯೇಸುವಿನ ಮರಣದವರೆಗಿನ ಕಾರ್ಯಗಳನ್ನು ಹಿಂದಿನ ಪಾಠದಲ್ಲಿ ಗಮನಿಸಿದ್ದೇವೆ. ಆತನ *ಮರಣವು* - ನಮ್ಮ ರಕ್ಷಣೆಯನ್ನು ದೃಢಪಡಿಸುತ್ತದೆ (ರೋಮಾಪುರ 5:10) - ಅದು ಸುವಾರ್ತೆಗೆ ಸಂಬಂಧ ಪಟ್ಟ ಮೂರು ಸಂಗತಿಗಳಲ್ಲಿ, ಒಂದು ಸಂಗತಿಯಾಗಿದೆ (1 ಕೊರಿಂಥ 15:1, 3). ಈ ಸರಣಿಯಲ್ಲಿ ಯೇಸು ಶಿಲುಬೆಯಲ್ಲಿದ್ದ ಅಂತಿಮ ಕ್ಷಣ, ಬಂಡೆಯಲ್ಲಿನ ಆತನ *ಸಮಾಧಿ* ನಂತರ ಆತನ *ಪುನರುತ್ಥಾನದ* ಅಧ್ಯಯನವಾಗಿದೆ (1 ಕೊರಿಂಥ 15:4). *ಶುಕ್ರವಾರದ* ಅಂತಿಮ ತಾಸುಗಳ ವಿಚಾರವೂ ಆಗಿದೆ,[1] ನಂತರ ಕ್ರಿಸ್ತನು ಮರಣಿಸಿದನು; *ಶನಿವಾರ* ಆತನ ದೇಹವನ್ನು ಸಮಾಧಿಯಲ್ಲಿಟ್ಟರು, ನಂತರ *ಭಾನುವಾರದ* ಮೊದಲ ಹಂತ, ಆತನು ಮರಣದಿಂದ ಎದ್ದನು. ಈ ಮೂರು ದಿನಗಳು ಚರಿತ್ರೆಯಲ್ಲಿನ ಪ್ರಮುಖ ದಿನಗಳು, ಆ ದಿನಗಳಲ್ಲಿ ನಡೆದ ಘಟನೆಗಳು ನಮ್ಮ ಹೃದಯಗಳ ನಿರೀಕ್ಷೆಯಾಗಿದೆ.

# ಶುಕ್ರವಾರದ ಅಂತ್ಯ: ದುಃಖದ ಸಮಯ
# (ಮತ್ತಾಯ 27:55-61; ಮಾರ್ಕ 15:40-47;
# ಲೂಕ 23:49-56; ಯೋಹಾನ 19:31-42)

**ನಂಬಿಗಸ್ತರಾದ ಸ್ತ್ರೀಯರು**

ಹಿಂದಿನ ಪಾಠದಲ್ಲಿ ಶಿಲುಬೆಯ ಬಳಿ ನಿಂತಿದ್ದ ನಾಲ್ಕು ಜನ ಸ್ತ್ರೀಯರ ಕುರಿತು ನೋಡಿದ್ದೇವೆ. ಆತನ ತಾಯಿ, ತಾಯಿಯ ತಂಗಿ (ಪ್ರಾಯಶಃ ಸಲೋಮೆ); ಕ್ಲೋಪನ ಹೆಂಡತಿಯಾದ ಮರಿಯಳು; ಮತ್ತು ಮಗ್ದಲದ ಮರಿಯಳು (ಯೋಹಾನ 19:25).[2] ಯೋಹಾನನು ಯೇಸುವಿನ ತಾಯಿಯನ್ನು ಆತನ ಬಳಿಯಿಂದ ಕರೆದೊಯ್ದ ನಂತರ (ಯೋಹಾನ 19:27), ಇತರೆ ಸ್ತ್ರೀಯರು ಗುಂಪಿನ ಬದಿಯಲ್ಲಿ ನಡೆದರು. ಪಾಠದ ಆರಂಭದಲ್ಲಿ, ಈ ರೀತಿಯಾಗಿ ಓದುತ್ತೇವೆ,

> ಇದಲ್ಲದೆ ಅನೇಕ ಸ್ತ್ರೀಯರು ಅಲ್ಲಿ ಇದ್ದು ದೂರದಿಂದ ನೋಡುತ್ತಿದ್ದರು. ಇವರು ಯೇಸುವಿನ ಸೇವೆ ಮಾಡುತ್ತಾ ಗಲಿಲಾಯದಿಂದ ಆತನ ಹಿಂದೆ ಬಂದಿದ್ದರು. ಇವರಲ್ಲಿ ಮಗ್ದಲದ ಮರಿಯಳೂ ಜೆಬೆದಾಯನ ಮಕ್ಕಳ ತಾಯಿಯೂ ಇದ್ದರು. ಇದಲ್ಲದೆ ಅಲ್ಲಿ ಸ್ತ್ರೀಯರು ಸಹ ದೂರದಿಂದ ನೋಡುತ್ತಿದ್ದರು; ಇವರಲ್ಲಿ, ಆ ಗಲಿಲಾಯದಲ್ಲಿದ್ದಾಗ ಆತನನ್ನು ಹಿಂಬಾಲಿಸಿ ಸೇವೆ ಮಾಡುತ್ತಿದ್ದವರಾದ ಮಗ್ದಲದ ಮರಿಯ, ಚಿಕ್ಕ ಯಾಕೋಬನ ಮತ್ತು ಯೋಸೆಯ ತಾಯಿಯಾದ ಮರಿಯ, [ಸಲೋಮೆ] ಎಂಬವರೂ ಆತನ ಸಂಗಡ ಯೆರೂಸಲೇಮಿಗೆ ಬಂದಿದ್ದ ಇನ್ನೂ ಅನೇಕ ಸ್ತ್ರೀಯರು ಇದ್ದರು (ಮತ್ತಾಯ 27:55, 56; ನೋಡಿ ಮಾರ್ಕ 15:40, 41; ಲೂಕ 23:49).

ಗಲಿಲಾಯದಲ್ಲಿ ಯೇಸುವಿಗೆ ಸೇವೆ ಮಾಡಿದ ಈ ಅಮೂಲ್ಯವಾದ ಸ್ತ್ರೀಯರು (ಮಾರ್ಕ 15:41; ನೋಡಿ ಲೂಕ 8:2, 3). ಆತನು ಸಾಯುವಾಗ, ಆತನನ್ನು ಬಿಟ್ಟು ಹೋಗಲಿಲ್ಲ. ಆತನ ಮರಣದ ಸಮಯದಲ್ಲಿ ಕಡೇಯದಾಗಿ ಇದ್ದವರು, ಆತನ ಪುನರುತ್ಥಾನದಲ್ಲಿ ಪ್ರಥಮವಾಗಿದ್ದರು. ಅವರಲ್ಲಿ ಇಬ್ಬರು ಆತನ ಮರಣಕ್ಕೆ (ಮತ್ತಾಯ 27:55, 56; ಮಾರ್ಕ 15:40, 41), ಹೂಣಿಡುವಿಕೆಗೆ (ಮತ್ತಾಯ 27:61; ಮಾರ್ಕ 15:47; ಲೂಕ 23:55), ಮತ್ತು ಆತನ ಪುನರುತ್ಥಾನಕ್ಕೆ ಸಾಕ್ಷಿಯಾಗಿದ್ದರು (ಮತ್ತಾಯ 28:1-10).

**ಸಾಮರಸ್ಯವಿಲ್ಲದ ನಾಯಕರು**

ಮಧ್ಯಾಹ್ನ 3 ಗಂಟೆಯ ಸಮಯದಲ್ಲಿ ಯೇಸು ಮರಣಹೊಂದಿದನು (ನೋಡಿರಿ ಮತ್ತಾಯ 27:45-50). ಸೂರ್ಯಸ್ಥಮಾನದ ಮೊದಲು, ಅಂದರೆ ಸಬ್ಬತ್ತಿನ ಆರಂಭದಲ್ಲಿ, “ಆ ಹೊತ್ತು ಸೌರಣೆಯ ದಿವಸವಾಗಿದ್ದರಿಂದ ಯೆಹೂದ್ಯರು - ಸಬ್ಬತ್ ದಿನದಲ್ಲಿ ಶವಗಳು ಶಿಲುಬೆಯ ಮೇಲೆ ಇರಬಾರದೆಂದು ಪಿಲಾತನನ್ನು - ಅವರ ಕಾಲುಗಳನ್ನು ಮುರಿಸಿ ಅವರನ್ನು ತೆಗೆಸಿಹಾಕಬೇಕೆಂಬುದಾಗಿ ಕೇಳಿಕೊಂಡರು; ಯಾಕಂದರೆ ಆ ಸಬ್ಬತ್ ದಿನವು ಬಹು ವಿಶೇಷವಾದದ್ದು” (ಯೋಹಾನ 19:31). ಈ ವಚನವು ದೊಡ್ಡದಾಗಿರುವದರಿಂದ, ವಿವರ ಹೇಗೆ ಯೋಗ್ಯವಾಗಿದೆ:

*“ಸೌರಣೆಯ ದಿನ.”* ಸಬ್ಬತ್ತಿನ ಹಿಂದಿನ ದಿನವು (ಶುಕ್ರವಾರಕ್ಕೆ ಸಮಾನವಾದ) ಸೌರಣೆಯ ದಿನವಾಗಿತ್ತು (ಶನಿವಾರಕ್ಕೆ ಸಮಾನವಾದ ದಿನ).

*“ಸಬ್ಬತ್ ದಿನದಲ್ಲಿ ಶವಗಳು ಶಿಲುಬೆಯ ಮೇಲಿರಬಾರದು.”* ಅದರ ಕುರಿತ ಧರ್ಮಶಾಸ್ತ್ರದಲ್ಲಿ,

ಅಪರಾಧ ಮಾಡಿದವನು ಮರಣ ಶಿಕ್ಷೆಯನ್ನು ಹೊಂದಿದ ಮೇಲೆ ನೀವು ಅವನ ಶವವನ್ನು ಮರಕ್ಕೆ ತೂಗಹಾಕಿದರೆ ಅದು ರಾತ್ರಿಯಲ್ಲಿಯೂ ಮರದ ಮೇಲೆ ಇರಬಾರದು; ಅದೇ ದಿನದಲ್ಲಿ ಅದನ್ನು ನೆಲದಲ್ಲಿ ಹೂಣಬೇಕು. ನಿಮ್ಮ ದೇವರಾದ ಯೆಹೋವನು ನಿಮಗೆ ಸ್ವದೇಶವಾಗುವದಕ್ಕೆ ಕೊಡುವ ದೇಶವು ಅಪವಿತ್ರವಾಗಬಾರದು. ಮರಕ್ಕೆ ತೂಗಹಾಕಲ್ಪಟ್ಟವನು ದೇವರ ಶಾಪವನ್ನು ಹೊಂದಿದವನಲ್ಲವೇ (ಧರ್ಮೋಪದೇಶ ಕಾಂಡ 21:22, 23; ನೋಡಿ ಯೆಹೋಶುವ 8:29; 10:26, 27).

ಈ ವಾಕ್ಯಭಾಗದಲ್ಲಿರುವ "ನೇತು ಹಾಕು" ಅಂದರೆ ಒಬ್ಬ ಕುತ್ತಿಗೆಯನ್ನು ಬಿಗಿದು ನೇತು ಹಾಕುವದು ಅಥವಾ ಬೆಂಕಿಯ ಮೇಲೆ ಕಟ್ಟಿ ಹಾಕುವದು ಎಂಬ ಅರ್ಥವಾಗಿದೆ, ಆದರೆ ಯೆಹೂದ್ಯರು "ಕ್ರೂಜೆಗೆ ಹಾಕುವದು" ಎಂದು ಅರ್ಥೈಸಿದ್ದರು (ನೋಡಿ ಗಲಾತ್ಯ 3:13). ಧರ್ಮೋಪದೇಶಕಾಂಡ 21ರ ಪ್ರಕಾರ, ಆ ಶುಕ್ರವಾರದಂದು ಗೊಲ್ಗಾಥದಲ್ಲಿ ಮರಣ ಹೊಂದಿದವರನ್ನು ಸೂರ್ಯಸ್ತಮಾನದ ಒಳಗಾಗಿ ಹೂಣಿಡಬೇಕಿತ್ತು.[3]

*"ಆ ಸಬ್ಬತ್ ದಿನ ಪ್ರಮುಖವಾಗಿತ್ತು."* ಮೂಲ ಬರವಣಿಗೆಯಲ್ಲಿ "ಅದು ಮಹತ್ವದ ದಿನ ವಾಗಿತ್ತು" ಎಂಬುದಾಗಿದೆ. NIVಯಲ್ಲಿ "ವಿಶೇಷ ಸಬ್ಬತ್" ಎಲ್ಲಾ ಸಬ್ಬತ್‌ಗಳು ಪ್ರಮುಖವಾ ದರೂ ಪಸ್ಕದ ಸಮಯದಲ್ಲಿನ ಸಬ್ಬತ್ ಅತಿ ವಿಶೇಷವಾಗಿತ್ತು. ಅದು ಹುಳಿ ಇಲ್ಲದ ರೊಟ್ಟಿ ಆರಂಭದ ವಾರವಾದ್ದರಿಂದ ಅದು ಗುರುತರವಾದ ಸಬ್ಬತ್ ಆಗಿತ್ತು.[4]

*"ಅವರ ಕಾಲುಗಳನ್ನು ಮುರಿಯಲು ಪಿಲಾತನಿಂದ ಅಪ್ಪಣೆ ಪಡೆದರು."* ಕ್ರೂಜಿತನಾದವನು ವೇದನೆ ಪಡಬೇಕೆಂದು ರೋಮಾಯರು ಬಯಸಿದರೂ, ಕೆಲವು ಸಂದರ್ಭಗಳಲ್ಲಿ, ಅವರ ಕಾಲುಗಳನ್ನು ಮುರಿಯುವ ಮೂಲಕ,[5] ಅವನು ಬೇಗನೆ ಸಾಯುವಂತೆ ಮಾಡುತ್ತಿದ್ದರು. ಆಗ ಅವರಿಗೆ ಉಸಿರಾಟದ ತೊಂದರೆಯಾಗಿ ಪ್ರಾಣಬಿಡುತ್ತಿದ್ದರು.

*"ಅವರನ್ನು ತೆಗೆಸಿಹಾಕಬೇಕೆಂದು ಕೇಳಿಕೊಂಡರು."* ಅವರನ್ನು ಕೊಂದು, ಅವರ ದೇಹಗಳನ್ನು ಹೂಣಿಡಬೇಕೆಂದು ಯೆಹೂದ್ಯನಾಯಕರು ರೋಮಾ ಅಧಿಕಾರಿಗಳಲ್ಲಿ ಮನವಿ ಮಾಡಿದರು. ಸಂಪ್ರದಾಯಿಕವಾಗಿ ಹೆಣವನ್ನು ಮುಟ್ಟಿ ತಮ್ಮನ್ನು ಅಶುದ್ಧ ಮಾಡಿಕೊಳ್ಳಲು ಯೆಹೂದ್ಯರು ಬಯಸಲಿಲ್ಲ (ಅರಣ್ಯಕಾಂಡ 19:11). ಅಪರಾಧಿಗಳ ಶವಗಳನ್ನು ಪ್ರತ್ಯೇಕವಾಗಿ ಹೂಣಿಡಲು ಪ್ರತ್ಯೇಕವಾದ ಸಮಾದಿಗಳನ್ನು ರೋಮಾಯರು ಹೊಂದಿದ್ದರು.

ಈಗ ಯೆಹೂದ್ಯ ನಾಯಕರಲ್ಲಿದ್ದ ಕಪಟತನ ಹಾಗೂ ಅತೃಪ್ತಿಯ ಪ್ರದರ್ಶನವಾಯಿತು. "ಸಬ್ಬತ್ತಿನ ಒಡೆಯನನ್ನೆ" ಶಿಲುಬೆಗೆ ಹಾಕಲು ಯೆಹೂದ್ಯರು ಮುಂದಾಗಿದ್ದರು (ಮತ್ತಾಯ 12:8; ಮಾರ್ಕ 2:28), ಆದರೆ ಈಗ ಸಬ್ಬತ್ತಿನ ಬಗ್ಗೆ ಅವರು ಕಾಳಜಿ ತೋರುತ್ತಿದ್ದಾರೆ.

**ಮನಸ್ಸಾಕ್ಷಿ ಹೊಂದಿದ್ದ ಸಿಪಾಯಿಗಳು**

ಯೆಹೂದ್ಯರ ಮನವಿಯನ್ನು ಲಾಲಿಸಿದ ಪಿಲಾತನು ಕಲ್ವಾರಿಗೆ ಆ ದೇಶವನ್ನು ರವಾನೆ ಮಾಡಿದನು. "ಆದದರಿಂದ ಸಿಪಾಯಿಗಳು ಬಂದು ಮೊದಲನೆಯವನ ಕಾಲುಗಳನ್ನು ಅವನ ಜೊತೆಯಲ್ಲಿ ಶಿಲುಬೆಗೆ ಹಾಕಿಸಿಕೊಂಡಿದ್ದ ಮತ್ತೊಬ್ಬನ ಕಾಲುಗಳನ್ನೇ ಮುರಿದರು" (ಯೋಹಾನ 19:32). ಒಂದು ಮರದ ತುಂಡನ್ನು ಇದಕ್ಕಾಗಿ ಬಳಸುತ್ತಿದ್ದರು. "ಆದರೆ ಯೇಸುವಿನ ಬಳಿಗೆ ಬಂದಾಗ ಆತನು ಆಗಲೇ ಸತ್ತಿರುವದನ್ನು ಅವರು ಕಂಡು ಆತನ ಕಾಲುಗಳನ್ನು ಮುರಿಯಲಿಲ್ಲ" (19:33).

ಸಿಪಾಯಿಗಳು ಆತನ ಮರಣವನ್ನು ಅಲ್ಪವಾಗಿ ಪರಿಗಣಿಸಲಿಲ್ಲ. ಆತನ ಮರಣವನ್ನು ದೃಢಪಡಿಸಲು, "ಆದರೂ ಸಿಪಾಯಿಗಳಲ್ಲಿ ಒಬ್ಬನು ಈಟಿಯಿಂದ ಆತನ ಪಕ್ಕೆಯನ್ನು ತಿವಿದನು" (ಯೋಹಾನ 19:34ಎ). ಇದು ಕೇವಲ ಚರ್ಮದ ಪರೀಕ್ಷೆಯಲ್ಲ. ಪಕ್ಕೆಯಿಂದ ಹೃದಯದವರೆಗೆ ಈಟಿಯನ್ನು ತಿವಿಯಲಾಯಿತು. ಆಗ ಪಕ್ಕೆಯಲ್ಲಿ ಒಂದು ಕೈಯನ್ನು ಇಡುವಷ್ಟು ದೊಡ್ಡ ಗಾಯವಾಯಿತು (ಯೋಹಾನ 20:25, 27). ಅಪರಾಧಿಯನ್ನು ಶಿಲುಬೆಯಿಂದ

ಇಳಿಸುವ ಮೊದಲು ಸಿಪಾಯಿಗಳು ಅವರ ಮರಣವನ್ನು ದೃಢೀಕರಿಸಿಕೊಳ್ಳಬೇಕಿದ್ದರಿಂದ, ಪಕ್ಕೆಯ ಎಲುಬಿನ ಮೂಲಕ ಹೃದಯನ್ನು ಈಟಿಯಿಂದ ತಿವಿದಿದ್ದರು.[6] "ಸಿಪಾಯಿಯು ಸ್ವಂತ ಜವಾಬ್ದಾರಿಯನ್ನು ಹೊಂದಿದವನಾಗಿ, ಕ್ರಿಸ್ತನು ಸತ್ತಿರುವನೆಂದು ದೃಢಪಡಿಸಿದನು. ಅದರಲ್ಲಿ ಯಾವ ಸಂದೇಹವಿರಲಿಲ್ಲ."[7]

ಹಳೇ ಒಡಂಬಡಿಕೆಯ ಮೇರೆಗೆ ಯೇಸುವಿನ ಮೂಳೆಗಳನ್ನು ಮುರಿಯಲಿಲ್ಲ (ಯೋಹಾನ 19:36; ಕೀರ್ತನೆ 24:20).[8] ಆದ್ದರಿಂದ ಆತನ ಪಕ್ಕೆಗೆ ಈಟಿಯಿಂದ ತಿವಿಯಲಾಯಿತು (ಯೋಹಾನ 19:37; ನೋಡಿ ಜೆಕರ್ಯ 12:10).

ಆತನ ಪಕ್ಕೆಗೆ ತಿವಿದ ತಕ್ಷಣ "ರಕ್ತವು ನೀರು ಹೊರಟಿತು" (ಯೋಹಾನ 19:34ಬಿ). ಶವಗಳಲ್ಲಿ ರಕ್ತವು ಸೋರದೆ ಇರುವದರಿಂದ, ವಿವರಣಾಕಾರರು ವೈದ್ಯಕೀಯ ವಿವರಣೆ ನೀಡಲು ಪ್ರಯತ್ನಿಸಿರುವರು. ಯೇಸುವಿನ ಹೃದಯ ಮುರಿಯಲ್ಪಟ್ಟಿದ್ದರಿಂದ, ಆತನು ಮರಣ ಹೊಂದಿದ್ದನು. ಆದ್ದರಿಂದ ರಕ್ತವು ಸೋರಿತು ಎಂದು ಹೇಳಲಾಗಿದೆ (ನೋಡಿ ಕೀರ್ತನೆ 69:20).[9] ಯೇಸುವಿನ ಮರಣದ ಕುರಿತು ಊಹೆಯ, ವೈದ್ಯಕೀಯ ವಿವರಣೆ ನೀಡಲಾಗುತ್ತದೆ. ಸಹಜವಾಗಿ ಆತನ ದೇಹವು ಕೊಳೆಯಲಾರಂಭಿಸಿತು. ಆದರೆ ಪೌಲನ ಮತ್ತು ಪೇತ್ರನ ಪ್ರಕಾರ, "ಆತನ ದೇಹವು ಕೊಳೆಯಲಿಲ್ಲ" (ಅಪೊಸ್ತಲರ ಕೃತ್ಯಗಳು 2:31; ನೋಡಿ 13:37).

ಪ್ರೇರಿತವಲ್ಲದ ಕ್ರೈಸ್ತ ಬರಹಗಾರರ ಪ್ರಕಾರ ನೀರು ಮತ್ತು ರಕ್ತವು ರಹಸ್ಯವಾದ ಸಂಕೇತ ಗಳನ್ನು ಹೊಂದಿರುತ್ತದೆ. ಅನೇಕರು, ಅದರಲ್ಲಿ ಕರ್ತನ ಭೋಜನ ಹಾಗೂ ದೀಕ್ಷಾಸ್ನಾನದ ಸಂಸ್ಕಾರಗಳಿಂದ "ಬಂದಿದೆ." ಕೆಲವರು ಯೋಹಾನ 19:34ನ್ನು 1 ಯೋಹಾನ 5:6, 8ಕ್ಕೆ ಹೋಲಿಸಿರುವರು.[10] ಹೇಗೂ, ಯೋಹಾನ 19:34ರಲ್ಲಿ ಈ ವಿಧವಾದ ಸಂಕೇತಗಳು ಇರುವದಿಲ್ಲ.

ನಮ್ಮ ಪಾಪದ ನಿಮಿತ್ತವಾಗಿ, ಯೇಸು ಸತ್ತನು ಎಂಬ ತತ್ವವನ್ನು ನೀರು ಮತ್ತು ರಕ್ತದಲ್ಲಿ ನಾವುಗಳು ಕಾಣುತ್ತೇವೆ. ಇದನ್ನು ಮಾತ್ರ ನಾವುಗಳು ಒಪ್ಪಿಕೊಳ್ಳೋಣ. ಈ ನೀರು ಮತ್ತು ರಕ್ತವು, ಯೋಹಾನನ ಪ್ರಕಾರ, ಮನುಷ್ಯರ ಅನುಭವಕ್ಕೆ ವಿರುದ್ಧವಾಗಿವೆ. ಅದರ ಕುರಿತಾಗಿ ತನ್ನ ವಿವರಣೆಯನ್ನು ನೀಡಿದ್ದಾನೆ (ಯೋಹಾನ 19:35).

ಯೋಹಾನನ ವಿವರಣೆಗಳು ವಿವಿಧವಾದ ಉದ್ದೇಶಗಳನ್ನು ಹೊಂದಿರುತ್ತವೆ. ಯೇಸು ಜ್ಞಾನ ತಪ್ಪಿದವನಾಗಿರದೇ, ಆತನು *ನಿಜವಾಗಿ ಸತ್ತಿದ್ದನು.*[11] ಒಂದು ವೈದ್ಯಕೀಯ ವಿವರಣೆ ಹೀಗಿರುತ್ತದೆ:

> ಆತನ ಪಕ್ಕೆಗಳಿಗೆ ತಿವಿಯುವ ಮುನ್ನವೇ ಆತನು ಮರಣ ಹೊಂದಿದ್ದನು. ಎಂಬುದು ಚಾರಿತ್ರಿಕ ಹಾಗೂ ವೈದ್ಯಕೀಯ ನಿರ್ಣಯವಾಗಿರುತ್ತದೆ. ಆಧುನಿಕ ವೈದ್ಯಕೀಯ ಪರಿಶೀಲನೆಯ ಮೇರೆಗೂ ಆತನು ಶಿಲುಬೆಯ ಮೇಲೆ ಸಾಯಲಿಲ್ಲ ಎಂಬುದನ್ನು ನಿರೂಪಿಸಿರುವದಿಲ್ಲ.[12]

**ಧೈರ್ಯದ ಅನುಯಾಯಿಗಳು**

ಆ ಮೂರು ವ್ಯಕ್ತಿಗಳು ಮರಣ ಹೊಂದಿರುವದನ್ನು ಖಚಿತ ಪಡಿಸಿಕೊಂಡ ಸಿಪಾಯಿಗಳು, ಅವರನ್ನು ಶಿಲುಬೆಯಿಂದ ಇಳಿಸಿ, ಆ ಸಂಪ್ರದಾಯಿಕವಾಗಿ ಹೂಣಿಡಲು ಸಾಗಿದರು. ವಾರಸುದಾರರಿದಿದ್ದರೆ, ಯೇಸುವಿನ ದೇಹಕ್ಕೂ ಇದೇ ಗತಿ ಉಂಟಾಗುತ್ತಿತ್ತು. ಆದರೆ ಒಬ್ಬ ವಾರಸುದಾರನಿದ್ದನು: ಅವನು ಯೇಸುವಿನ ಕುಟುಂಬದವನಾಗಿರಲಿಲ್ಲ, ಆತನು ಅಪೊಸ್ತಲರಲ್ಲಿ ಒಬ್ಬನು ಆಗಿರಲಿಲ್ಲ, ಆದರೆ ಅವನು ಒಬ್ಬ ಗುಪ್ತವಾಗಿದ್ದ ಶಿಷ್ಯನಾಗಿದ್ದನು. "ಯಾಕಂದರೆ ಅವನು ಯೆಹೂದ್ಯರಿಗೆ ಭಯಪಟ್ಟಿದ್ದನು" (ಯೋಹಾನ 19:38). ಅವನು ಹಿರೀ ಸಭೆಯ ಸದಸ್ಯನಾಗಿದ್ದನು (ಮಾರ್ಕ 15:43; ಲೂಕ 23:50). ಆ ಹಿರಿ ಸಭೆಯವರೇ ಯೇಸುವನ್ನು

ಮರಣಕ್ಕೆ ಒಪ್ಪಿಸಿದ್ದರು!

ಅವನು "ಅರಿಮಥಾಯದ ಯೋಸೇಫನಾಗಿದ್ದನು" (ಮಾರ್ಕ 15:43; ಯೋಹಾನ 19:38; ನೋಡಿ ಮತ್ತಾಯ 27:57). ಅರಿಮಥಾಯವು ಯೆಹೂದ್ಯದ ಒಂದು ಪಟ್ಟಣವಾಗಿತ್ತು (ಲೂಕ 23:51[13]), ಪ್ರಾಯಶಃ ಯೆರೂಸಲೇಮಿನ ಉತ್ತರಕ್ಕೆ ಮತ್ತು ಸಮಾರ್ಯದ ಅಂಚಿನಲ್ಲಿದ್ದ ಒಂದು ಹಳ್ಳಿ.[14] ಮತ್ತಾಯನು ಯೋಸೇಫನನ್ನು "ಅವನು ಶ್ರೀಮಂತನಾಗಿದ್ದನು" ಎಂದು ವರ್ಣಿಸಿರುವನು (ಮತ್ತಾಯ 27:57). ಯೆಶಾಯ 53:9 ಪ್ರವಾದನೆಯು ಅವನಲ್ಲಿ ಈಡೇರಿತು: "ಅವನು ಸತ್ತಾಗ ದುಷ್ಟರ ಮಧ್ಯ [ಎರಡು ಕಳ್ಳರು], ಪುಷ್ಟರ ನಡುವೆ [ಯೋಸೇಫ] ಅವನನ್ನು ಹೂಣಿಟ್ಟರು." ಯೋಸೇಫನು ಉತ್ತಮ ಗುಣದವನಾಗಿದ್ದನು "ಅವನು ದೇವರ ರಾಜ್ಯಕ್ಕಾಗಿ ಕಾಯುತ್ತಿದ್ದನು" (ಲೂಕ 23:50, 51; ನೋಡಿ ಮಾರ್ಕ 15:43). ಆ ರಾಜ್ಯವನ್ನು ಸ್ಥಾಪಿಸುವ ಮೆಸ್ಸೀಯನಿಗಾಗಿ ಕಾಯುತ್ತಿದ್ದು, ಆ ಮೆಸ್ಸೀಯನು ಯೇಸುವೇ ಎಂಬುದಾಗಿ ಗ್ರಹಿಸಿಕೊಂಡಿದ್ದನು (ಮತ್ತಾಯ 27:57; ಯೋಹಾನ 19:38).

ಅವನು ಯೇಸುವನ್ನು ಬಹಿರಂಗವಾಗಿ ಒಪ್ಪಿಕೊಂಡಿರಲಿಲ್ಲ. "ಅವನು ಹಿರೀ ಸಭೆಯ ಸದಸ್ಯನಾದ್ದರಿಂದ" (ಮಾರ್ಕ 15:43), ಅವನು ಯೇಸುವಿನಲ್ಲಿ ಇಟ್ಟಿರುವ ನಂಬಿಕೆಯನ್ನು ತೋರ್ಪಡಿಸುವದು, ಅವನ ಸ್ಥಾನಕ್ಕೆ ಅಡ್ಡಿಯುಂಟು ಮಾಡುವ ಸಾಧ್ಯತೆಯಿತ್ತು. ಮತ್ತು ಅವನನ್ನು ಯೆಹೂದ್ಯ ಸಮುದಾಯದಿಂದ ಹೊರಹಾಕುವ ಸಾಧ್ಯತೆಯೂ ಇತ್ತು (ಯೋಹಾನ 9:22[15]). ಲೂಕನ ಪ್ರಕಾರ, ಹಿರಿ ಸಭೆಯವರು ಯೇಸುವನ್ನು ಖಂಡಿಸಿದ್ದರು. "ಅವರ ಈ ಯೋಜನೆಗೆ ಯೋಸೇಫನ ಸಮ್ಮತಿ ಇಲ್ಲದಿದ್ದರೂ" ಅವನು ಯೇಸುವಿಗಾಗಿ ಪ್ರತಿಪಾದಿಸಲಿಲ್ಲ (ಲೂಕ 23:51).[16]

ಯೇಸುವಿನ ದೇಹವನ್ನು "ಪರಿಚಯವಿಲ್ಲದ ಸ್ಥಳಕ್ಕೆ ಸಾಗಿಸುವರೆಂಬ ವರ್ತಮಾನವನ್ನು ಕೇಳಿ"[17] "ಧೈರ್ಯದಿಂದ ಪಿಲಾತನ ಮುಂದೆ ಹೋದನು" (ಮಾರ್ಕ 15:43ಬಿ). ಅವನು ಯಾರಿಗೂ ಹೆದರದವನಾಗಿ "ಯೇಸುವಿನ ದೇಹಕ್ಕಾಗಿ ಬೇಡಿಕೊಂಡನು" (ಯೋಹಾನ 19:38ಬಿ).

ಯೆಹೂದ್ಯರ ಮಹಾಸಭೆಯ ಕಡೆಯಿಂದ ಬಂದ ಈ ಮನವಿಯ ಕುರಿತು ಪಿಲಾತನು ಆಶ್ಚರ್ಯ ಪಟ್ಟಿರಬಹುದು. ಯೇಸು ಈಗಾಗಲೇ ಸತ್ತಿರುವ ವಿಚಾರವನ್ನು ಕೇಳಿ ಆಶ್ಚರ್ಯಪಟ್ಟಿರಬಹುದು (ಮಾರ್ಕ 15:44ಎ). ಯೇಸುವಿನ ಮರಣದ ಕುರಿತು ಶತಾಧಿಪತಿಯು ಪಿಲಾತನಿಗೆ ದೃಢಪಡಿಸಿದ ನಂತರ, "ಶವವನ್ನು ಯೋಸೇಫನಿಗೆ ಕೊಡಿಸಿದನು" (ಮಾರ್ಕ 15:44ಬಿ, 45; ನೋಡಿ ಮತ್ತಾಯ 27:58ಬಿ; ಯೋಹಾನ 19:38ಸಿ).

ಯೋಸೇಫನು, ಪಿಲಾತನಿಂದ ಅಪ್ಪಣೆಯನ್ನು ಪಡೆದ ಸಮಯವು (ಆಗಲೇ ಸಬ್ಬತ್) ಮುಂಜಾನೆಯ ಆಗಮನವಾಗಿತ್ತು (ಮತ್ತಾಯ 27:57ಎ; ಮಾರ್ಕ 15:42; ಲೂಕ 23:54). ಈಗ ಯೋಸೋಫನು ತ್ವರಿತವಾಗಿ ಮುಂದುವರೆದನು. "ಅವನು ನಾರು ಮಡಿಯನ್ನು" (ಮಾರ್ಕ 15:46), ತರುವಷ್ಟರಲ್ಲಿ, ಹಿರಿಸಭೆಯ ಮತ್ತೊಬ್ಬ ರಹಸ್ಯ ವಿಶ್ವಾಸಿಯಾದ ನಿಕೋದೇಮನು (ನೋಡಿ ಯೋಹಾನ 7:50), ಸುಗಂಧ ದ್ರವ್ಯವನ್ನು ಕೂಡಿಸಿದನು (ನೋಡಿ ಯೋಹಾನ 19:39). ಯೋಹಾನ 3:1-21; 7:50-52ರಲ್ಲಿ[18] ನಿಕೋದೇಮನ ಬಗ್ಗೆ ತಿಳಿದಿದ್ದೇವೆ. "ಇವೆರೆಲ್ಲರು ಯೇಸುವನ್ನು ಪ್ರೀತಿಯಿಂದ ಸಮಾಧಿಮಾಡಿದರು. ಯೇಸುವಿನ ಶಿಷ್ಯರಾಗಲು ಭಯಗೊಂಡವರು, ಯೇಸುವಿನ ದೇಹಕ್ಕಾಗಿ ಬೇಡಿಕೊಂಡದ್ದು ಆಶ್ಚರ್ಯವಾಗಿದೆ. ಈ ಕಾರ್ಯವನ್ನು ಮಾಡಲು ಅವರು ಅಂಜಲಿಲ್ಲ."[19]

ಯೇಸುವಿನ ಕೈ ಕಾಲುಗಳಲ್ಲಿದ್ದ ಕ್ರೂರವಾದ ಮೊಳೆಗಳನ್ನು ತೆಗೆದು, ಆತನ ದೇಹವನ್ನು ಯೋಸೇಫನು ಕ್ರೂಜೆಯಿಂದ ಇಳಿಸಿ,[20] ಅದನ್ನು ನಾರುಮಡಿಯಿಂದ ಸುತ್ತಿದನು (ಮತ್ತಾಯ 27:59; ಮಾರ್ಕ 15:46; ಲೂಕ 23:53ಎ). ನಂತರ ಅವನು "ಆ ದೇಹವನ್ನು ತೆಗೆದುಕೊಂಡು ಹೋದನು" (ಯೋಹಾನ 19:38).

ಗೊಲ್ಗಥದ ಬಳಿಯಲ್ಲಿ "ಒಂದು ತೋಟವಿತ್ತು, ಆ ತೋಟದಲ್ಲಿ ಒಂದು ಹೊಸ ಸಮಾಧಿಯಿತ್ತು.[21] ಅದರಲ್ಲಿ ಅದುವರೆಗೆ ಯಾರನ್ನು ಸಮಾಧಿ ಮಾಡಿರಲಿಲ್ಲ"[22] (ಯೋಹಾನ 19:41). ಅದು "ಯೋಸೇಫನ ಸ್ವಂತ ಸಮಾಧಿಯಾಗಿದ್ದು, ಅದನ್ನು ಅವನೇ ಸಿದ್ಧಮಾಡಿಸಿದ್ದನು"[23] (ಮತ್ತಾಯ 27:60).[24] ಯೋಸೇಫ ಹಾಗೂ ನಿಕೋದೇಮನಿಗೆ ಹೆಚ್ಚು ಸಮಯವಿಲ್ಲದಿರಲಾಗಿ ಹಾಗೂ "ಆ ಸಮಾಧಿಯು ಹತ್ತಿರವಿದ್ದದರಿಂದ" (ಯೋಹಾನ 19:42), ಯೇಸುವಿನ ದೇಹವನ್ನು ಒಯ್ಯಲು ಮುಂದಾದರು.[25] ಕ್ರಿಸ್ತನ ಶರೀರವನ್ನು ಕೊಂಡುಯ್ಯುವಷ್ಟರಲ್ಲಿ, ಶಿಲುಬೆಯ ಬಳಿಯಿಂದ ಇಬ್ಬರು ಸ್ತ್ರಿಯರು ಅವರನ್ನು ಹಿಂಬಾಲಿಸಿದರು (ಲೂಕ 23:55; ಮತ್ತಾಯ 27:61).

ಹಿರೀ ಸಭೆಯ ಸದಸ್ಯರು ಆತನ ದೇಹವನ್ನು ಸಮಾಧಿಯಲ್ಲಿಟ್ಟು (ಮತ್ತಾಯ 27:60; ಮಾರ್ಕ 15:46; ಲೂಕ 23:53; ಯೋಹಾನ 19:42), ನಂತರ ಸಂಸ್ಕಾರಕ್ಕೆ ಅಣಿಯಾದರು. ಇದನ್ನು ಮಾಡುವಾಗ, "ಯೆಹೂದ್ಯರ ಪದ್ಧತಿಯನ್ನು ಅನುಸರಿಸಿದರು" (ಯೋಹಾನ 19:40ಬಿ); ಕೆಲವು ಸಂಸ್ಕೃತಿಗಳ ಪ್ರಕಾರ, ಶರೀರದ ಯಾವುದೇ ಭಾಗವನ್ನು ಅವರು ಪ್ರತ್ಯೇಕ ಮಾಡಲಿಲ್ಲ (ಐಗುಪ್ತರಂತೆ).

ಯೆಹೂದ್ಯರ ಪದ್ಧತಿಯ ಪ್ರಕಾರ ಅವರು ದೇಹವನ್ನು ತೊಳೆದು, ಅದರಲ್ಲಿದ್ದ ರಕ್ತದ ಕಲೆ, ಹಾಗೂ ಶರೀರದ ಎಲ್ಲಾ ಕೊಳೆಯನ್ನು ತೆಗೆಯುತ್ತಿದ್ದರು. "ನಂತರ ಅದನ್ನು ಸುಗಂಧ ದ್ರವ್ಯಗಳ ಸಹಿತವಾಗಿ ನಾರುಬಟ್ಟೆಯಲ್ಲಿ ಸುತ್ತಿದ್ದರು" (ನೋಡಿ ಯೋಹಾನ 19:40ಎ). ಮುಖವನ್ನು ಹೊರತು ಪಡಿಸಿ, ಪೂರ್ತಿ ದೇಹವನ್ನು ಬಟ್ಟೆಯಿಂದ[26] ಸುತ್ತುತ್ತಿದ್ದರು (ನೋಡಿ ಯೋಹಾನ 11:44). ನಂತರ ಅದಕ್ಕೆ ಸುಗಂಧ ದ್ರವ್ಯವನ್ನು ಸವರುತ್ತಿದ್ದರು. ನಂತರ ಪುನಃ ಪುನಃ ಬಟ್ಟೆಯಿಂದ ಸುತ್ತುತ್ತಿದ್ದರು. ನಿಕೋದೇಮನು ಸಹ ರಕ್ತಬೋಳ ಅಗರುಗಳನ್ನು ಕಲಸಿದ ಚೂರ್ಣವನ್ನು ನೂರು ಸೇರಿನಷ್ಟು ತಕ್ಕೊಂಡು ಬಂದಿದ್ದನು (ಯೋಹಾನ 19:39).[27]

ಅವರಿಬ್ಬರೂ ಯೇಸುವಿನ ದೇಹವನ್ನು ತ್ವರಿತವಾಗಿ ಸಿದ್ಧಮಾಡುವಾಗ, ಆ ದೇಹದ ನಿಮಿತ್ತ ಅಶುದ್ಧರಾಗಿದ್ದರು (ಅರಣ್ಯಕಾಂಡ 19:11). ಇದರಿಂದ ಅವರು ಹುಳಿಯಿಲ್ಲದ ರೊಟ್ಟಿಗಳ ಹಬ್ಬದಲ್ಲಿ ಪಾಲುಗಾರರಾಗುವದು ಅಸಾಧ್ಯವಾಯಿತು. ಆದರೆ ಹಬ್ಬದ ಬಗ್ಗೆ ಅವರು ಚಿಂತಿಸಲಿಲ್ಲ.

ಯೋಸೇಫ ಹಾಗೂ ನಿಕೋದೇಮರು, ತಮ್ಮ ಸಾಮರ್ಥ್ಯದ ಪ್ರಕಾರ ಯೇಸುವಿನ ದೇಹವನ್ನು ಉತ್ತಮವಾಗಿ ಸಿದ್ಧಪಡಿಸಿದ ನಂತರ, ಆತನ ಮುಖವನ್ನು ಕೈಪಾವುಡದಿಂದ ಮುಚ್ಚಿದರು (ನೋಡಿ ಯೋಹಾನ 20:7; 11:44). ಕತ್ತಲಾಗುವಾಗ ಯೋಸೇಫನು "ಒಂದು ದೊಡ್ಡ ಕಲ್ಲನು" ಸಮಾಧಿಗೆ ಅಡ್ಡವಾಗಿ ಎಳೆದನು[28] - "ಸಮಾಧಿಯ ಪ್ರವೇಶ ದ್ವಾರಕ್ಕೆ ಎಳೆದು, ಹೊರಟುಹೋದನು" (ಮತ್ತಾಯ 27:60ಬಿ; ಮಾರ್ಕ 16:4).[29]

**ಅತೃಪ್ತರಾದ ಸ್ತ್ರೀಯರು**

ಈ ಕಾರ್ಯವನ್ನು ಗಮನಿಸುತ್ತಿದ್ದ ಸ್ತ್ರೀಯರನ್ನು ಈ ಗಂಡಸರು ಹೆಚ್ಚು ಗಮನಿಸದೆ ಇರಬಹುದು. "ಆ ಇಬ್ಬರು ಸ್ತ್ರಿಯರು ಸಮಾಧಿಗೆ ಎದುರಾಗಿ, ಅಥವಾ ಎದುರಿಗಿದ್ದ ಗುಡ್ಡದಲ್ಲಿ, ಕುಳಿತಿರಬಹುದು." ಮಗ್ದಲದ ಮರಿಯಳು ಮತ್ತು ಯಾಕೋಬ, ಯೋಸೇಫರವರ (ಮತ್ತಾಯ 27:61; ನೋಡಿ ಮಾರ್ಕ 15:40, 47).[30] ತಾಯಿಯಾದ ಮರಿಯಳು, ಇವರಿಬ್ಬರೂ ಗೊಲ್ಗಥದಿಂದ ಹಿಂಬಾಲಿಸಿ ಬಂದಿದ್ದರು. ಯೋಸೇಫ ಹಾಗೂ ನಿಕೋದೇಮರ ತ್ವರಿತವಾದ ಕಾರ್ಯಗಳನ್ನು ಸಹ ಕಂಡಿದ್ದರು (ಲೂಕ 23:55) ಆದರೆ ಅವರು ಮಾಡಿದ ಕೃತ್ಯಗಳಲ್ಲಿ, ಆ ಸ್ತ್ರೀಯರು ತೃಪ್ತರಾಗಿರಲಿಲ್ಲ. ಅವರು ಆ ತೋಟವನ್ನು ತೊರೆದು, ಯೆರೂಸಲೇಮಿನ ತಮ್ಮ ವಾಸಸ್ಥಾನಕ್ಕೆ ಹಿಂದಿರುಗಿ ಬಂದು, "ಪರಿಮಳ ದ್ರವ್ಯಗಳನ್ನು ಸುಗಂಧ ತೈಲವನ್ನು ಸಿದ್ಧಮಾಡಿಕೊಂಡರು" (ಲೂಕ 23:56ಎ). ಸಬ್ಬತ್ ಕಳೆದ ನಂತರ ಸಮಾಧಿಗೆ

ಹಿಂದಿರುಗಲು ಸಿದ್ಧತೆ ಮಾಡಿಕೊಂಡರು (ನೋಡಿ ಲೂಕ 23:56ಬಿ; ಮಾರ್ಕ 16:1).

## ಶನಿವಾರ: ಹತಾಶೆಯ ಸಮಯ

## (ಮತ್ತಾಯ 27:62-66; ಲೂಕ 23:56ಬಿ; ಯೋಹಾನ 20:19ಎ)

### ನಿಷ್ಕ್ರಿಯೆಗೊಂಡ ಸ್ನೇಹಿತರು

ಧರ್ಮಶಾಸ್ತ್ರದ ಪ್ರಕಾರ "ಆ ಸ್ತ್ರೀಯರು ಸಬ್ಬತ್ ದಿನದಲ್ಲಿ ವಿಶ್ರಾಂತಿ ಪಡೆದರು" (ಲೂಕ 23:56ಬಿ). "ಕ್ರಿಸ್ತನ ಅನುಯಾಯಿಗಳಿಗೆ ಅದು ಹತಾಶೆಯ ದಿನವಾದ್ದರಿಂದ ಅವರು ಬಾಗಿಲನ್ನು ಮುಚ್ಚಿಕೊಂಡು ಅಳುತ್ತಾ ದುಃಖ ಭರಿತರಾಗಿದ್ದರು" (ಮಾರ್ಕ 16:10). "ಯಾಕಂದರೆ ಅವರು ಯೆಹೂದ್ಯರಿಗೆ ಭಯಪಟ್ಟಿದ್ದರು" (ಯೋಹಾನ 20:19; ನೋಡಿ NIV). ಅವರ ನಿರೀಕ್ಷೆಯಲ್ಲೊ "ಯೋಸೇಫನ ಸಮಾಧಿಯಲ್ಲಿದ್ದ ಯೇಸುವಿನೊಂದಿಗೆ ಸಮಾಧಿಯಾಗಿತ್ತು."[31] "ಅಲ್ಲಿ ಎರಡು ಪಟ್ಟು ದುಃಖವಿತ್ತು. ಅವರು ಬಹಳವಾಗಿ ಪ್ರೀತಿ ಮಾಡಿದ ಸ್ನೇಹಿತರ ಮರಣ ಹಾಗೂ ತಿರಸ್ಕೃತದಿಂದ ಅವರು ನೊಂದುಕೊಂಡಿದ್ದರು. ಎಲ್ಲದಕ್ಕಿಂತ ಹೆಚ್ಚಾಗಿ ಅವರ ನಂಬಿಕೆಯು ಮರಿಚಿಕೆಯಾಗಿತ್ತು."[32] ಯೇಸು ಮುಂತಿಳಿಸಿದ ಹಾಗೆ ಅವರು ಕುರುಬನಿಲ್ಲದ ಕುರಿಗಳಾಗಿದ್ದರು (ಮತ್ತಾಯ 26:31; ಮಾರ್ಕ 14:27).

### ಕ್ರಿಯಾಶೀಲರಾಗಿದ್ದ ವೈರಿಗಳು

ಯೇಸುವಿನ ಶಿಷ್ಯರು ಸಬ್ಬತ್ ದಿನದಲ್ಲಿ ವಿಶ್ರಾಂತಿಯಲ್ಲಿದ್ದರೂ, ಅವರ ವೈರಿಗಳು ಕ್ರಿಯಾಶೀಲರಾಗಿದ್ದರು. "ಮರುದಿನ ಅಂದರೆ ಸೌರಣೆಯ ದಿನ ಕಳೆದ ಮೇಲೆ ಮಹಾಯಾಜಕರೂ, ಫರಿಸಾಯರು ಪಿಲಾತನ ಬಳಿಗೆ ಕೂಡಿ ಬಂದರು" (ಮತ್ತಾಯ 27:62).[33] ಈ ಸಭೆಯು ಸೂರ್ಯಸ್ಥಮಾನವಾಗಿ, ಸಬ್ಬತ್ ಆರಂಭವಾದಾಗ ಕೂಡಿ ಬಂದಿರಬಹುದು. ಆ ಒಂದು ರಾತ್ರಿ ಯೇಸುವಿನ ಸಮಾಧಿಯನ್ನು ಕಾಯದೆ ಇರುವದು ಆಶ್ಚರ್ಯವಾಗಿದೆ.

ಯೆಹೂದ್ಯ ನಾಯಕರು ಪಿಲಾತನಿಗೆ, "ದೊರೆಯೇ, ಆ ಮೋಸಗಾರರು ಬದುಕಿದ್ದಾಗ ತಾನು ಮೂರು ದಿನದ ಮೇಲೆ ಎಳುತ್ತೇನೆ ಅಂತ ಹೇಳಿದ್ದು ನಮ್ಮ ನೆನಪಿಗೆ ಬಂತು" ಅಂದರು (ಮತ್ತಾಯ 27:63). ಅವರ ಮಾತುಗಳು ಗಮನಾರ್ಹವಾಗಿದ್ದವು. ಪುನರುತ್ಥಾನವಾಗುವರೆಂದು ಯೇಸು ತನ್ನ ಶಿಷ್ಯರಿಗೆ *ಸಾಮಾನ್ಯವಾಗಿ* ಹೇಳಿದ್ದರು (ಮತ್ತಾಯ 16:21; 17:22, 23; ಲೂಕ 18:31-33) - ಆದರೆ ಅವರು ಈ ಸಂಗತಿಯನ್ನು ಅರ್ಥಮಾಡಿಕೊಳ್ಳಲಿಲ್ಲ (ಮಾರ್ಕ 9:9, 10) - ಆತನು ಪುನರುತ್ಥಾದ ವಿಚಾರವನ್ನು *ಮುಚ್ಚದೆ* ಸಾಮಾನ್ಯ ಜನರಿಗೆ ತಿಳಿಸಿದ್ದನು (ಆತನ ವೈರಿಗಳಿಗೂ ಸಹ) (ಮತ್ತಾಯ 12:39, 40; 16:4; ಯೋಹಾನ 2:19-21; 10:17, 18) - ಈಗಾಗಲೇ ಸಂದೇಶವು ಯೆಹೂದ್ಯರನ್ನು ತಲುಪಿತು![34] ಅವರು ಆತನನ್ನು ನಂಬದೆ ಹೋದರೂ, ಆತನು "ಮೂರು ದಿವಸಗಳಾದ" ನಂತರ "ಎಳುವನು" ಎಂಬ ಉಪದೇಶವನ್ನು ನಂಬಿದ್ದರು.

ಆದ್ದರಿಂದ ಅವರು ಅಧಿಕಾರಿಯೊಂದಿಗೆ ಮನವಿ ಮಾಡಿಕೊಂಡರು: "ಆದಕಾರಣ ಮೂರನೆಯ ದಿನದ[35] ತನಕ ಸಮಾಧಿಯನ್ನು ಭದ್ರಮಾಡಿ ಕಾಯುವದಕ್ಕೆ ಅಪ್ಪಣೆಕೊಡಬೇಕು; ಇಲ್ಲದಿದ್ದರೆ ಅವನ ಶಿಷ್ಯರು ಬಂದು ಅವನನ್ನು ಕದ್ದುಕೊಂಡು ಹೋಗಿ 'ಸತ್ತವನು ಬದುಕಿ ಬಂದಿದ್ದಾನೆ' ಎಂದು ಹೇಳುವರು; ಆಗ ಮೊದಲನೆಯ ಮೋಸಕ್ಕಿಂತ ಕಡೆಯ ಮೋಸವು ಕೆಡುಕಾದೀತು ಅಂದರು" (ಮತ್ತಾಯ 27:64). ಹಿರಿಸಭೆಯವರು ಕುಯುಕ್ತಿಗಳನ್ನು ಮಾಡುವದರಲ್ಲಿ ನಿಪುಣರಾಗಿದ್ದರು (ಮತ್ತಾಯ 26:59), ಶಿಷ್ಯರು ಸಹ ಅದೇ ರೀತಿಯಲ್ಲಿ

ಮಾಡಬಹುದೆಂದು ಊಹಿಸಿದರು. (ನಾವುಗಳು ಸಹ ಅದೇ ರೀತಿ ಆಲೋಚಿಸುತ್ತೇವೆ.)

ಪಿಲಾತನು ಅವರಿಗೆ, "ಕಾವಲುಗಾರರನ್ನು ತಕ್ಕೊಳ್ಳಿ" (ಮತ್ತಾಯ 27:65ಎ). ಒಂದು ವೇಳೆ ಪಿಲಾತನು, "ನಿಮ್ಮ ದೇವಾಲಯದಲ್ಲಿರುವ ಕಾವಲುದಂಡನ್ನು ಉಪಯೋಗಿಸಿ ಎಂದು ಹೇಳಿರಬಹುದೆಂಬ ಊಹೆ ಇದೆ." ಹೇಗೂ, ಪಿಲಾತನು ಒಪ್ಪಿ *ರೋಮಾ* ಕಾವಲು ದಂಡನ್ನು ಕಳುಹಿಸಿದನು.[36] ಹಾಗೆ ಮಾಡಿದ ನಂತರ, "[ಹೋಗಿ], ನಿಮಗೆ ತಿಳಿದ ಹಾಗೆ (ಸಮಾಧಿಯನ್ನು) ಭದ್ರಮಾಡಿ" ಎಂದು ಹೇಳಿದನು (ಮತ್ತಾಯ 27:65ಬಿ).

ಯಾಜಕರು, "ಸಮಾಧಿಯನ್ನು ಸುಭದ್ರ ಮಾಡಿದರು" (ಮಾತ್ತಾಯ 27:66ಎ) - ಅಂದರೆ ಅವರು ಸುಭದ್ರಮಾಡುವಷ್ಟು ಮಾಡಿದರು. ಆ ಸಮಾಧಿಯಲ್ಲಿ ಮೊದಲನೆಯದಾಗಿ, ಯೇಸುವಿನ ದೇಹವಿರುವದನ್ನು ಕಾವಲುಗಾರರು ಖಚಿತಪಡಿಸಿಕೊಂಡರು.[37] ನಂತರ ಅವರು ಕಲ್ಲನ್ನು ಉರುಳಿಸಿ, "ಮುದ್ರೆ ಹಾಕಿದರು" (ಮತ್ತಾಯ 27:66ಸಿ). ಕಲ್ಲಿನ ತುದಿಗಳನ್ನು ಮಣ್ಣಿನಿಂದ ಅಥವಾ ಮೇಣದಿಂದ ಮುದ್ರೆ ಹಾಕಿರಬಹುದು ಅಥವಾ ಕಲ್ಲಿನಿಂದ ಜೋಡಣೆ ಮಾಡಿರಬಹುದು. ಯಾರು ಅದನ್ನು ಹಾಳು ಮಾಡಬಾರದೆಂದು ಮುದ್ರೆ ಹಾಕುತ್ತಿದ್ದರು. ಹಾಳು ಮಾಡಿದವರಿಗೆ ಮರಣ ಶಿಕ್ಷೆ ನೀಡಲಾಗುತ್ತಿತ್ತು.[38] ಕೊನೆಗೆ ರೋಮ್ ಕಾವಲುಗಾರರು ಅದನ್ನು ಭದ್ರ ಪಡಿಸಿದ ನಂತರ, ಅದನ್ನು ಕಾಯುತ್ತಿದ್ದರು (ಮತ್ತಾಯ 27:66ಬಿ).[39] ಇನ್ನು ಮೂರು ದಿವಸಗಳಲ್ಲಿ ಯೇಸುವಿನ ಕೊಳೆತ ದೇಹವನ್ನು ಜನರಿಗೆ ತೋರಿಸಿ, "ಕ್ರಿಸ್ತನ ಕುರಿತಾದ ಕ್ರಾಂತಿಯನ್ನು ನಿಸ್ತೇಜಗೊಳಿಸಬಹುದೆಂದು" ತೃಪ್ತಿಯಿಂದ, ಆ ನಾಯಕರು ಹೊರಟು ಹೋದರು.

## ಭಾನುವಾರದ ಮೊದಲ ಭಾಗ: ಅಪನಂಬಿಕೆಯ ಒಂದು ಸಮಯ
## (ಮತ್ತಾಯ 28:1-8; ಮಾರ್ಕ 16:1-9; ಲೂಕ 24:1-11)

ದುಃಖದಿಂದ ಸಬ್ಬತ್ ಅಂತ್ಯಗೊಂಡಿದ್ದರು; ವಾರದ ಮೊದಲನೆಯ ದಿನವು ಹಾಡಿನಿಂದ ಆರಂಭವಾಯಿತು. ಶಿಷ್ಯರು ಹತಾಶೆಯಿಂದ, ಆನಂದಕ್ಕೆ ಮುಂದಾದರು ಯೇಸು ಮರಣದಿಂದ ಎದ್ದು ಬಂದಿರುವ ವಿಚಾರವನ್ನು ನಂಬಲು ಅವರಿಗೆ ಕಷ್ಟಕರವಾಗಿತ್ತು.

### ಒಂದು ಅದ್ಭುತ

"ಸಕಲ ಅದ್ಭುತಗಳಲ್ಲಿ, ಪುನರುತ್ಥಾನವು ಮಹಾ ಅದ್ಭುತವಾಗಿದ್ದರೂ, ಸುವಾರ್ತಾ ಬರಹಗಳಲ್ಲಿ ಒಬ್ಬರಾದರೂ ಅದರ ಪರಿಪೂರ್ಣ ವಿವರಣೆಯನ್ನು ನೀಡಿರುವದಿಲ್ಲ. ಆ ಒಂದು ಪರಿಶುದ್ಧವಾದ ಚಿತ್ರಣವನ್ನು ಮರೆಮಾಡಲಾಗಿದೆ."[40] "ವಾರದ ಮೊದಲನೆಯ ದಿನದಲ್ಲಿ ಆತನು ಎದ್ದನು" ಎಂದು ಸರಳವಾಗಿ ಬರೆದಿದೆ (ಮಾರ್ಕ 16:9).[41] ಸೂರ್ಯೋದಯದಲ್ಲಿ ಪುನರುತ್ಥಾನವು ಉಂಟಾಯಿತು (ಯೋಹಾನ 20:1). ಮೊದಲನೆಯ ದಿನದ (ಸೂರ್ಯಸ್ತಮಾನ) ಆರಂಭ ಮರುದಿನ ಮುಂಜಾನೆಯ ನಡುವೆ ಯೇಸು ಎದ್ದು ಬಂದನು.[42]

ಯೇಸು ಮರಣಹೊಂದಿದಾಗ, ಆತನ ಆತ್ಮವು ಪಾತಾಳಕ್ಕೆ ಹೋಯಿತು (ಲೂಕ 23:43;[43] ಅಪೊಸ್ತಲರ ಕೃತ್ಯಗಳು 2:27, 31). ಆತನ ದೇಹವನ್ನು ಸಮಾಧಿಯಲ್ಲಿ ಇರಿಸಲಾಯಿತು. ರಾತ್ರಿಯ ಒಂದು ಜಾವದಲ್ಲಿ ಆತನ ದೇಹ ಪರಿವರ್ತನೆಗೊಂಡಿತು,[44] ನಂತರ ಆತನ ಆತ್ಮ ಹಿಂದಿರುಗಿತು, "ಆ ಆತ್ಮವನ್ನು ಆತನು ಮಧ್ಯಾಹ್ನ 3 ಗಂಟೆಯ ಸಮಯದಲ್ಲಿ ತಂದೆಗೆ ಒಪ್ಪಿಸಿಕೊಟ್ಟಿದ್ದನು. ... ಶುಕ್ರವಾರದಂದು ಆತ್ಮವು ಪ್ರತ್ಯೇಕಗೊಂಡು ನಂತರ ಆತನ ದೇಹಕ್ಕೆ ಪ್ರವೇಶ ಮಾಡಿದ ನಂತರ,[45] ಆತನು ಮರಣದಿಂದ ಎದ್ದು ಬಂದನು" (ಅಪೊಸ್ತಲರ ಕೃತ್ಯಗಳು 10:41),[46] ಸಮಾಧಿ ಬಟ್ಟೆಗಳನ್ನು ತ್ಯಜಿಸಿ[47] ಪುನಃ "ಸಾಯುವವನಾಗದೆ ಎದ್ದು

ಬಂದನು" (ರೋಮಾಪುರ 6:9). ಪೀಠರ್ ಮಾರ್ಷಲ್‌ರವರು ಸಂಗೀತಮಯವಾಗಿ ಈ ವೃತ್ತಾಂತವನ್ನು ಬರೆದಿದ್ದಾರೆ:

> ... ಸೂರ್ಯಸ್ತಮಾನ ಹಾಗೂ ಸೂರ್ಯೋದಯದಲ್ಲಿ,
> ಅರಿಮಥಾಯದ ಯೇಸೇಫನ ಸಮಾಧಿಯಲ್ಲಿ
> ಅಲೌಕಿಕವಾದ ಶಕ್ತಿಯು ಉಂಟಾಗಲು ...
> ದೇವರು ತಾನೇ ತೋಟದಲ್ಲಿ ಓಡಾಡುತ್ತಾ ಉಸಿರನ್ನು ಬಿಡಲು.
> ತಣ್ಣಗಾದ ಕಲ್ಲಿನ ಮೇಲೆ ಮಲಗಿದ್ದ
> ಯೇಸುವಿನ ದೇಹದಲ್ಲಿ ದೇವರ ಉಸಿರು ಸೇರಲು;
> ಸತ್ತು ಹೋದವನು ಎದ್ದು ಬಂದನು
> ಆತನು ಶವದ ಬಟ್ಟೆಗಳಿಂದ ಹೊರಬಂದು
> ಸಮಾಧಿಗಳ ನಡುವೆ ಹಾದುಹೋದನು,
> ಕ್ಷಣಕಾಲ ತನ್ನ ಕಾಲಮೇಲೆ ನಿಂತು,
> ನಂತರ ಇಬ್ಬನಿಯ ತೋಟದಲ್ಲಿ ಚಿರಕಾಲ
> ಜೀವಿಸುವವನಾದನು.[48]

**ಸಂದೇಶಕನು**

ಪುನರುತ್ಥಾನವಾಗಿ ಇನ್ನೂ ಮೊಬ್ಬಿರುವಾಗ (ಮತ್ತಾಯ 28:1; ಯೋಹಾನ 20:1), "ಆಗ ಮಹಾ ... ಭೂಕಂಪವಾಯಿತು" ಮತ್ತು "ಕರ್ತನ ದೂತನು ಆಕಾಶದಿಂದ ಇಳಿದು ಬಂದು ಆ ಕಲ್ಲನ್ನು ಬಾಗಲಿಂದ ಉರುಳಿಸಿ ಅದರ ಮೇಲೆ [ಸಮಾಧಿ ಮುಂದೆ] ಕೂತುಕೊಂಡನು" (ಮತ್ತಾಯ 28:2). ಯೇಸುವನ್ನು ಹೊರಬಿಡಲು, ಅವನು ಕಲ್ಲನ್ನು ಉರುಳಿಸಲಿಲ್ಲ[49] - ಯಾಕೆಂದರೆ ಯೇಸು ಈಗಾಗಲೇ ಅಲ್ಲಿಂದ ಹೊರಟುಹೋಗಿದ್ದನು - ಖಾಲಿಯಾದ ಸಮಾಧಿಯೊಳಗೆ, ಇತರರು ಹೋಗುವ ಸಲುವಾಗಿ ಕಲ್ಲನ್ನು ಉರುಳಿಸಲಾಗಿತ್ತು. ಬೇರೆ ಯಾರೂ ಮತ್ತೆ ಅದನ್ನು ಮುಚ್ಚದಂತೆ, ದೇವದೂತನು ಆ ಕಲ್ಲಿನ ಮೇಲೆ ಕುಳಿತಿರಬಹುದು.

ಆ ದೇವ ದೂತನ ಮುಖ ಭಾವವು "ಮಿಂಚಿನಂತೆ ಇತ್ತು, ಮತ್ತು ಅವನ ಉಡುಪು ಹಿಮದಂತೆ ಬೆಳಗಿತ್ತು" (ಮತ್ತಾಯ 28:3). ಕಾವಲುಗಾರರು ದೇವದೂತನನ್ನು ನೋಡಿದಾಗ, "ಕಾವಲುಗಾರರು ಅವನಿಗೆ ಹೆದರಿ ... ನಡುಗಿ ಸತ್ತವರ ಹಾಗಾದರು" (ಮತ್ತಾಯ 28:4). ನಂತರ ಅವರು ಎಚ್ಚರಗೊಂಡು, ದೂತನಿಂದ ದೂರ ಸರಿದಿರಬಹುದು, ಏಕೆಂದರೆ ಈಗ ಸಮಾಧಿ ಕಾಯುವದು ಅವಶ್ಯವಿರಲಿಲ್ಲ![50]

**ಒಂದು ಸಂದೇಶ**

ಈಗ ಖಾಲಿಯಾದ ಸಮಾಧಿಯನ್ನು ಸಂದೇಶಕರು ಸಂದರ್ಶಿಸಬಹುದಿತ್ತು. ಅದರ ಸರಿಯಾದ ಅನುಕ್ರಮವನ್ನು ವಹಿಸುವದು ಸಾಧ್ಯವಿಲ್ಲ. ಈಗಿನ ಹಾಗೂ ಮುಂದಿನ ಪಾಠಗಳಲ್ಲಿ ಬೋಧಿಸುವಂಥ ಕ್ರಮವನ್ನು ಅನುಸರಿಸಲಾಗಿದೆ. ಹಾಗೂ ಈ ಸಂಗತಿ ಪ್ರಮುಖವಲ್ಲ. ಯೇಸು *ಮರಣದಿಂದ* ಎದ್ದು ನೂರಾರು ಜನರಿಗೆ ಕಾಣಿಸಿಕೊಂಡ ವಿಚಾರವು ಬಹು ಪ್ರಮುಖವಾಗಿದೆ.

ಸಬ್ಬತ್ತಿನ ನಂತರ,[51] ವಾರದ ಮೊದಲನೆಯ ದಿನವು ಆರಂಭವಾಗುತ್ತಿರುವಾಗ ಮಗ್ದಲದ ಮರಿಯಳು ಆ ಬೇರೆ ಮರಿಯಳೂ ಸಮಾಧಿಯನ್ನು ನೋಡುವದಕ್ಕೆ ಬಂದರು. ಯೋಸೇಫ ಹಾಗೂ ನಿಕೋದೇಮರು ಮಾಡಿದ ಹೂಣಿಡುವಿಕೆಯ ಕ್ರಮಕ್ಕೆ ಇವರು ಸಾಕ್ಷಿಯಾಗಿದ್ದರು - ಅವರೂ ಸಹ ಸಮಾಧಿಯ ಬಳಿಗೆ ಹೊರಟರು (ಮತ್ತಾಯ 28:1). ಅವರೊಂದಿಗೆ ಸಲೋಮಿಯೂ ಸಹ ಇದ್ದಳು.[52] ಇತರೆ ಸ್ತ್ರೀಯರೂ ಇದ್ದರು. ಆತನ ದೇಹಕ್ಕೆ ಹಚ್ಚುವದಕ್ಕಾಗಿ

ಸುಗಂಧ ದ್ರವ್ಯಗಳನ್ನು ಕೊಂಡರು (ಮಾರ್ಕ 16:1; ಲೂಕ 24:10).[53]

ಅವರು ತೋಟದ ಬಳಿ ಬರುವಾಗ, "ಸಮಾಧಿಯ ಬಾಗಿಲಿಂದ ಕಲ್ಲನ್ನು ನಮಗೋಸ್ಕರ ಉರುಳಿಸಿರುವವರು ಯಾರಿದ್ದಾರೆ?" ಎಂದು ಆಶ್ಚರ್ಯಪಟ್ಟರು (ಮಾರ್ಕ 16:3). ಅಗತ್ಯವಿಲ್ಲದೆ ಅವರು ಕಳವಳಗೊಂಡರು. ಅವರು ಸಮಾಧಿಯ ಬಳಿಗೆ ಬಂದಾಗ, "ಸಮಾಧಿಗೆ ಮುಚ್ಚಿದ ಕಲ್ಲು ಅಲ್ಲಿಂದ ಉರುಳಿಸಲ್ಪಟ್ಟಿರುವುದನ್ನು ಕಂಡರು" (ಲೂಕ 24:2). ಸಮಾಧಿಯೊಳಗೆ ಬಂದಾಗ ಯೇಸುವಿನ ದೇಹವನ್ನು ಕಾಣದೇ ಇರುವಾಗ ಅವರಿಗೆ ಗಲಿಬಿಲಿ ಉಂಟಾಯಿತು (ಲೂಕ 24:3, 4).[54]

ಆಗ ಅಲ್ಲಿ, "ಈ ವಿಷಯದಲ್ಲಿ ಅವರಿಗೆ ಗಲಿಬಿಲಿ ಉಂಟಾದಾಗ ಹೊಳೆಯುವ ಉಡುಪನ್ನು ಧರಿಸಿದ್ದ ಇಬ್ಬರು ಪುರುಷರು ಆಕಸ್ಮಾತ್ತಾಗಿ ಅವರ ಬಳಿ ನಿಂತುಕೊಂಡರು" (ಲೂಕ 24:4).[55] ಸ್ತ್ರೀಯರು ಅವರನ್ನು ನೋಡಿದಾಗ, "ಭಯ ಹಿಡಿದವರಾದರು ನೆಲದಲ್ಲಿ ಬೊಗ್ಗಿಕೊಂಡರು" (ಲೂಕ 24:5ಎ; NLT). ಅಲ್ಲಿ ಒಬ್ಬ "ಪುರುಷ" ಇದ್ದನು ಸಮಾಧಿಯ ಕಲ್ಲನ್ನು ಸರಿಸಿದವರಲ್ಲಿ ಆತನು ಒಬ್ಬನಾಗಿದ್ದನು (ಮತ್ತಾಯ 28:2, 5). ಅವನು ಅವರಿಗೆ ಹೀಗೆ ಹೇಳಿದನು,

> ನೀವು ಹೆದರಬೇಡಿರಿ; ಶಿಲುಬೆಗೆ ಹಾಕಲ್ಪಟ್ಟಿದ್ದ ಯೇಸುವನ್ನು ಹುಡುಕುತ್ತೀರೆಂದು ಬಲ್ಲೆನು; ಆತನು ಇಲ್ಲಿ ಇಲ್ಲ (ಮತ್ತಾಯ 28:5).
>
> ಸತ್ತವರೊಳ ಬದುಕಿರುವವನನ್ನು ಹುಡುಕುವದೇನು? (ಲೂಕ 24:5ಬಿ).
>
> ತಾನು ಹೇಳದಂತೆ ಎದ್ದಿದ್ದಾನೆ; ಬನ್ನಿ, ಆತನು ಮಲಗಿದ್ದ ಸ್ಥಳವನ್ನು ನೋಡಿರಿ[56] (ಮತ್ತಾಯ 28:6ಎ).
>
> ... ಆತನು ಇನ್ನೂ ಗಲಿಲಾಯದಲ್ಲಿದ್ದಾಗ - ಮನುಷ್ಯಕುಮಾರನು ಪಾಪಿಗಳಾದ ಮನುಷ್ಯರ ಕೈಗೆ ಒಪ್ಪಿಸಲ್ಪಟ್ಟು ಶಿಲುಬೆಗೆ ಹಾಕಲ್ಪಟ್ಟು ಮೂರನೆಯ ದಿನದಲ್ಲಿ ಎದ್ದು ಬರುವದು ಅಗತ್ಯವೆಂದು ನಿಮಗೆ ಹೇಳಿದ್ದನ್ನು ನೆನಪಿಗೆ ತಂದುಕೊಳ್ಳಿರಿ ಎಂದು ಹೇಳಿದರು (24:6, 7).
>
> ಬನ್ನಿ, ಆತನು ಮಲಗಿದ್ದ ಸ್ಥಳವನ್ನು ನೋಡಿರಿ; ಮತ್ತು ಬೇಗ ಹೋಗಿ ಆತನ ಶಿಷ್ಯರಿಗೆ - ಸತ್ತವನು ಬದುಕಿದ್ದಾನೆ, ಆತನು ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುತ್ತಾನೆ, ಅಲ್ಲಿ ಆತನನ್ನು ಕಾಣುವಿರಿ ಎಂದು ತಿಳಿಸಿರಿ;[57] ನಾನು ನಿಮಗೆ ಹೇಳಿದ್ದೇನೆ ನೋಡಿರಿ ಎಂದು ಹೇಳಿದನು (ಮತ್ತಾಯ 28:6ಬಿ, 7; ನೋಡಿ ನೋಡಿ 16:7).

ನಂತರ ಸ್ತ್ರೀಯರು ಯೇಸುವಿನ ಮಾತುಗಳನ್ನು ನೆನಪು ಮಾಡಿಕೊಂಡರು (ಲೂಕ 24:8) ಮತ್ತು "ಅವರು ಭಯದಿಂದಲೂ ಮಹಾ ಸಂತೋಷದಿಂದಲೂ ಬೇಗ ಸಮಾದಿಯ ಬಳಿಯಿಂದ ಹೊರಟು ಮಹಾ ಸಂತೋಷದಿಂದಲೂ ಬೇಗ ಸಮಾದಿಯ ಬಳಿಯಿಂದ ಹೊರಟು ಆತನ ಶಿಷ್ಯರಿಗೆ ತಿಳಿಸುವದಕ್ಕೆ ಹೋದರು" (ಮತ್ತಾಯ 28:8).[58] ಮಾರ್ಗ ಮಧ್ಯದಲ್ಲಿ, "ಅವರು ಯಾರಿಗೂ ಏನೂ ಹೇಳಲಿಲ್ಲ" (ಮಾರ್ಕ 16:8),[59] "ಆದರೆ ಹನ್ನೊಂದು[60] ಮಂದಿ ಶಿಷ್ಯರಿಗೂ, ಉಳಿದವರೆಲ್ಲರಿಗೂ ತಿಳಿಸಿದರು" (ಲೂಕ 24:9; ನೋಡಿ ವಚನಗಳು 22, 23).

ಪರಲೋಕದ ಸಂದೇಶಕರ ಹಾಗೂ ನಿರೀಕ್ಷೆಯ ಕುರಿತು ಹೇಳುವಲ್ಲಿ ಅವರು ಬಹು ಸಂತಸಗೊಂಡರು ಎಂಬುದನ್ನು ಊಹಿಸುವುದು ಅಷ್ಟೇನು ಕಷ್ಟವಲ್ಲ. ದುಃಖಕರವಾದ ವಿಷಯವೇನೆಂದರೆ, ಅವರ ಮಾತುಗಳು ಅಪೊಸ್ತಲರಿಗೆ "ಬರಿ ಹರಟೆಯಾಗಿ ತೋರಿದವು, ಮತ್ತು ಅವರು ನಂಬಲಿಲ್ಲ" (ಲೂಕ 24:10, 11).[61] ಅದನ್ನು ನಿರೂಪಿಸುವದಕ್ಕೆ ಹೆಚ್ಚಾದ ಪುರಾವೆಗಳು ಬೇಕಾಗಿತ್ತು - ಅವುಗಳು ಹೆಚ್ಚು ಕಾಲಕ್ಕೆ ಮುಂಚಿತವಾಗಿಯು ಬರುವೆವು.

## ಮುಕ್ತಾಯ

ಅಪೊಸ್ತಲರು, ಆ ಸ್ತ್ರೀಯರ "ವರದಿಯನ್ನು ನಂಬಲಿಲ್ಲ." ಯೇಸುವಿನ ಮರಣವನ್ನು ನೋಡಿದವರು. ಆತನು ಎದ್ದು ಬರುವನೆಂದು ನಂಬಲಿಲ್ಲ, ಆತನನ್ನು ಹೂಣಿಟ್ಟವರು ಸಹ ನಂಬಲಿಲ್ಲ. ಬಾಗಿಲು ಮುಚ್ಚಿಕೊಂಡಿದ್ದ ಆತನ ಶಿಷ್ಯರೂ ಸಹ ನಂಬಲಿಲ್ಲ. ಆತನನ್ನು ಅಭಿಷೇಕಿಸಲು ಬಂದ ಸ್ತ್ರೀಯರು ಸಹ ನಂಬಲಿಲ್ಲ. ಹೌದು ಖಂಡಿತವಾಗಿ, ಆತನ ವೈರಿಗಳು ಸಹ ನಂಬಲಿಲ್ಲ. H. I. ಹೇಸ್ಟರ್‌ರವರು, "ಯೇಸುವಿನ ಪುನರುತ್ಥಾನದ ಕುರಿತು, ಆತನ ಶಿಷ್ಯರಿಗೆ ಮನವರಿಕೆ ಮಾಡುವದು ಪ್ರಥಮ ಕೆಲಸವಾಗಿತ್ತು."[62] ಆ ಕೆಲಸದ ಸಾಧ್ಯತೆಯನ್ನು ಮುಂದಿನ ಪಾಠದಲ್ಲಿ ಅಭ್ಯಾಸಿಸೋಣ.

---

ಟಿಪ್ಪಣಿಗಳು

[1]ಎರಡನೇಯ ಭಾಗದ ಅಧ್ಯಾಯದಲ್ಲಿ ಇದು ಮೊದಲಿನ ಭಾಗವಾಗಿದೆ. ಸಮಯವನ್ನು ವಿನಿಯೋಗಿಸಿದೆ, ಈ ಅಧ್ಯಾಯ ಮತ್ತು ಮುಂದಿನದನ್ನು ಸಂಕ್ಷೇಪಿಸಿ ಒಂದೇ ಸಾರಿ ಅದನ್ನು ಮಾಡಬಹುದು. [2]"ರೋಮನ್ನರ ಶಿಲುಬೆ ಮೇಲೆ ಆರು ಘಂಟೆಗಳು" "ಶಿಲುಬೆಯ ಬಳಿಯಲ್ಲಿ ಸ್ತ್ರೀ" ಈ ಅಧ್ಯಾಯಗಳಲ್ಲಿ ಚರ್ಚೆಯನ್ನು ನೋಡಿರಿ ಈ ಪುಸ್ತಕದಲ್ಲಿ ಕಾಣುವಿರಿ. [3]ಅನೇಕ ಬರಹಗಾರರು ನಂಬುತ್ತಾರೆ ಏನೆಂದರೆ ಯೆಹೂದ್ಯರು ಪ್ರೇರಿತವಲ್ಲದ ನಿಯಮ ಸಂಪ್ರದಾಯಗಳಿವೆ. ಶಿಲುಬೆ ಮೇಲೆ ಶವಗಳನ್ನು ನಂಬುತ್ತಿದ್ದರು. [4]ಎಲ್ಲಿಯಾದರು ಗಮನಿಸಿದಂತೆಯ ಒಂದು ದಿನದ ಪಸ್ಕ ಹಬ್ಬವಾದ ನಂತರ ತಕ್ಷಣದಲ್ಲಿ ಹುಳಿ ಇಲ್ಲದ ರೊಟ್ಟಿಯ ಹಬ್ಬ ಬರುತ್ತದೆ. ಹೊಸ ಒಡಂಬಡಿಕೆಯ ಕಾಲದಲ್ಲಿ ಎರಡು ಹಬ್ಬಗಳು ಒಟ್ಟುಗೂಡಿಸಿದ್ದಾರೆ ಮತ್ತು ಅವೆರಡನ್ನು ಪಸ್ಕವೆಂದು ತಿಳಿದಿದ್ದರು ಮತ್ತು ಹುಳಿಯಿಲ್ಲದ ರೊಟ್ಟಿ ಹಬ್ಬವೆಂದು ತಿಳಿದುಕೊಂಡಿದ್ದರು. ಈ ಭಾಗದ ಹೆಚ್ಚಿನ ವಿವರಣೆಗಾಗಿ "ಮಹತ್ವದ ದಿನ" ಎನ್ನುವ ಅಧ್ಯಾಯದಲ್ಲಿ ನೋಡಿರಿ ನಂತರ ಈ ಪುಸ್ತಕದಲ್ಲಿ ಕಾಣುವಿರಿ. [5]"ರೋಮಾಯರ ಶಿಲುಬೆಯಲ್ಲಿ ಆರು ಘಂಟೆಗಳು" ಎನ್ನುವ ಅಧ್ಯಾಯದಲ್ಲಿ ಶಿಲುಬೆ ಶ್ರಮೆಯ ವಿವರಣೆಯನ್ನು ಪುನರಾವಲೋಕನ ಮಾಡಿರಿ. [6]"ಘೋರವಾದ ಗಾಯ [ಅದನ್ನು] ಬಹುತೇಕವಾಗಿ ರೋಮಾ ಸೈನಿಕರಿಗೆ ಬೋಧಿಸುತ್ತಿದ್ದರು" ಎನ್ನುವ ಅಂಶವಾಗಿದೆ. (William D. Edwards, Wesley J. Gabel, and Floyd E. Hosmer, "On the Physical Death of Jesus Christ," *Journal of the American Medical Association* [21 March 1986]: 1460.) [7]R. C. Foster, *Studies in the Life of Christ* (Grand Rapids, Mich.: Baker Book House, 1971), 1286. [8]ಯೇಸುವಿನ ಮೂಳೆಗಳು ಮುರಿಯಲಿಲ್ಲ ಎನ್ನುವ ಅಂಶವು ಪ್ರಧಾನವಾದದ್ದು ಪಸ್ಕದ ಕುರಿಮರಿಯ ಕಲ್ಪನೆ ನೆರವೇರಿದೆ. [9]William Stroud in ಅವರಿಂದ *The Physical Cause of the Death of Christ* ಅಂಶವೆನ್ನುವದು ಮುಕ್ತಾಯಕ್ಕೆ ಮುಟ್ಟಿರುವದು ಇವರಿಂದಲೆ (cited in Foster, 1285–86). ಅನೇಕ ವೈದ್ಯಕೀಯ ಸಾಧ್ಯತೆಗಳನ್ನು Edwards, Gabel, and Hosmer, 1463ರಲ್ಲಿ ಪ್ರಸ್ತಾಪಿಸಿದ್ದಾರೆ. [10]1 ಯೋಹಾನ 5:6, 8, ಬೇರೆ ಬೇರೆ ವಿವರಣೆ ಕೊಡುವ ವಿಷಯವಾಗಿದೆ. ಬಹುಶಃ ಆ ಭಾಗದಲ್ಲಿ ನೀರು ಯೇಸುವಿನ ದೀಕ್ಷಾಸ್ನಾನ ಸೂಚಿಸುತ್ತದೆ, ರಕ್ತವು ಆತನ ಮರಣವನ್ನು ಸೂಚಿಸುತ್ತದೆ. (J. W. Roberts, *The Letters of John,* The Living Word Commentary series, ed. Everett Ferguson [Austin, Tex.: R. B. Sweet Co., 1968], 129–33.)

[11]ಯೇಸುವಿನ ಈ ಆಲೋಚನೆಯು ಇದು ಕಾಲ್ಪನಿಕ ಬಲಹೀನತೆಯುಳ್ಳದ್ದೆಂದು ಆತನ ಪುನರುತ್ಥಾನವನ್ನು ನಿರಾಕರಿಸುವವರು ಈ ಸಿದ್ಧಾಂತವನ್ನು ತೆಗೆದುಕೊಂಡುಬಂದರು. ಇದನ್ನು ಸಾಮಾನ್ಯವಾಗಿ "ಮೂರ್ಛೆ ಸಿದ್ಧಾಂತ" ಎಂದು ಕರೆಯುವರು. [12]Edwards, Gabel, and Hosmer, 1463. [13]"ಯೆಹೂದ್ಯರ" ಈ ಭಾಗವು ಸಾಮಾನ್ಯವಾಗಿ "ಯೂದಾಯದಲ್ಲಿ" ಎಂದು ವಿವರಿಸಿದ್ದಾರೆ. NIV ಅನುವಾದದಲ್ಲಿ "ಯೂದಾಯ ಪಟ್ಟಣ" ಎಂದು ಇದೆ. [14]"ಯೇಸುವಿನ ದಿನದಲ್ಲಿ ಪಾಲೆಸ್ತೀನ್" ಎಂಬ ಭೂಪಟದ ನಕ್ಷೆ ನೋಡಿರಿ. ಈ ಸ್ಥಳವನ್ನು ಕುರಿತು Alfred Edersheim, *The Life and Times of Jesus the Messiah,* New Updated Version (Peabody, Mass.: Hendrickson Publishers, 1993), 898ರಲ್ಲಿ ಚರ್ಚಿಸಿದ್ದಾರೆ. [15]ಯೋಹಾನ 9:22ರ ಮೇಲೆ ಇರುವ ವಿಮರ್ಶೆ ನೋಡಿರಿ ಎನ್ನುವ ಅಧ್ಯಾಯದಲ್ಲಿ ಕ್ರಿಸ್ತನ ಜೀವನ ಚರಿತ್ರೆ, 4ನೇ ಪುಸ್ತಕದಲ್ಲಿ ನೋಡಿ. [16]ಸಭಾಮಂಡಳಿ ಯೇಸುವಿಗೆ ಮರಣ ದಂಡನೆಗೆ ಮತ ಹಾಕಿದಾಗ ಯೋಸೇಫನು ಅಲ್ಲಿರಲಿಲ್ಲ ಎನ್ನುವ ಅರ್ಥವಾಗಿದೆಯಾ? ಆತನು ಉದ್ದೇಶದಿಂದಲೇ ದೂರ ಇದ್ದನು. ಇನ್ನೂ ಇತರೆ ಒತ್ತಡದ ಕೂಟಗಳಿದ್ದವು

ಅಥವಾ ಈ ಕೂಡುವಿಕೆಗೆ ಆತನಿಗೆ ಮಾಹಿತಿ ಕೊಟ್ಟಿರದೆ ಇರಬಹುದು. ಅವನು ಚಲಾವಣೆಯಿಂದ ಮತ್ತು ಕೂಡುವಿಕೆಗೆ ಹಾಜರಾಗಬಹುದಾಗಿತ್ತು. ಅದೆಲ್ಲ ನಾವು ಹೇಳಲಿಲ್ಲ, ಆದರೆ ಇದೆಲ್ಲ ನೋಡುವಾಗ ಯೋಸೇಫನು ಯೇಸುವಿನ ಪರವಾಗಿ ಮಾತಡಲಿಲ್ಲ ಎಂಬುದು ಕಾಣಿಸುತ್ತದೆ. [17]James Stalker, *The Trial and Death of Jesus Christ* (New York: A. C. Armstrong and Son, 1909), 310–11. [18]ಯೋಹಾನ 3:1-21ರ ವಿಮರ್ಶೆಗೆ ಈ ಅಧ್ಯಾಯ ನೋಡಿರಿ "A First Time for Everything" ಇದನ್ನು *ಕ್ರಿಸ್ತನ ಜೀವನ ಚರಿತ್ರೆ, 1ನ್ನು* ಪುಸ್ತಕವನ್ನು ನೋಡಿರಿ. ಯೋಹಾನ 7:50-52ರ ಮೇಲೆ ವಿಮರ್ಶೆಣೆ "ಯೆರೂಸಲೇಮಿಗೆ ಪ್ರಯಾಣ" ಎನ್ನುವ ಅಧ್ಯಾಯ ನೋಡಿರಿ. *ಕ್ರಿಸ್ತನ ಜೀವನ ಚರಿತ್ರೆ, 7ರಲ್ಲಿ* ಕಾಣಬಹುದು. [19]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 734. [20]ಯೇಸು ಶಿಲುಬೆ ಮೇಲೆ ಇರುವಾಗ ಆ ಶಿಲುಬೆಯನ್ನು ಮೊಳೆಗಳನ್ನು ತೆಗೆಯುವದಕ್ಕಿಂತ ಮೊದಲೆ ಇಳಿಸಿದರೋ ಅಥವಾ ಯೇಸು ಶಿಲುಬೆ ಮೇಲೆ ಇರುವಾಗ ಮೊಳೆಗಳನ್ನು ತೆಗೆದರೋ ಯಾವುದಾದರು ಒಂದು ಮಾಡಿರಬಹುದು, ಯೋಸೇಫನು ಶ್ರೀಮಂತ ವ್ಯಕ್ತಿ, ಬಹುಶಃ ಆತನಿಗೆ ಆಳುಗಳು ಇದ್ದಿರಬಹುದು ಈ ಕಾರ್ಯ ಮತ್ತು ಪ್ರಯತ್ನ ನಡೆದಿರಬಹುದು.

[21]ತೋಟವಿರುವ ಸ್ಥಳ ಮತ್ತು ಸಮಾದಿ ಅದು ಗೋಲ್ಗಥ ಸ್ಥಳದ ಮೇಲೆ ಅವಲಂಭನೆಗೊಂಡಿದೆ ಇದರ ಸಂಪೂರ್ಣ ವಿವರಣೆ "ವಿಜಯವೋ ದುರಂತವೋ?" ಅಧ್ಯಾಯದಲ್ಲಿ ನೋಡಿರಿ. ಇದನ್ನು *ಕ್ರಿಸ್ತನ ಜೀವನ ಚರಿತ್ರೆ, 6ನೇ* ಕಾಣುವಿರಿ. ಸಮಾದಿಯ ಕುರಿತಿರುವ ಹೆಚ್ಚಿನ ವಿಸ್ತಾರವಾದ ಐತಿಹಾಸಿಕ ಮತ್ತು ಪ್ರಾಚೀನ ವಸ್ತುಶಾಸ್ತ್ರ ಪುರಾವೆಗಳು ಇಲ್ಲಿ ಕಾಣಿಸುತ್ತದೆ John McRay, *Archaeology and the New Testament* (Grand Rapids, Mich.: Baker Book House, 1991), 206–17. [22]ಇಲ್ಲಿ ಒಂದು ಸಲಹೆ ಅದರ ಅಂಶವೇನೆಂದರೆ "ಇನ್ನೂ ಯಾರನ್ನು ಸಮಾಧಿಯಲ್ಲಿ ಹೂಣಿಟ್ಟಿಲ್ಲ" ಎಂಬುದರಲ್ಲಿ ಎದ್ದು ಬಂದಿರುವದರ ಕುರಿತು ಇರುವ ಸಂಶಯ ತೆಗೆದು ಹಾಕಲು ಒತ್ತಾಯ ಮಾಡಲಾಗಿದೆ. [23]ಅಲ್ಲಿ ಒಂದು ನೆಲಮಾಳಿಗೆ ಅಗೆದಿದ್ದಾರೆ ಅದು ಗುಡ್ಡದ ಒಂದು ಬದಿಯಲ್ಲಿದೆ ಆ ಸಮಾದಿಯ ವಿಷಯವೇನಂದರೆ ಅದು "ಕಲ್ಲಿನಲ್ಲಿ ಕೆತ್ತಿದ್ದಾಗಿದೆ" ಇದಕ್ಕೆ ಒಂದೇ ಒಂದು ಪ್ರವೇಶ ದ್ವಾರವಿದೆ ಎಂದು ಇದು ಸೂಚಿಸುತ್ತದೆ. [24]ಯೋಸೇಫನು ಅರಿಮಥಾಯದಿಂದ ಸಮಾದಿ ಕಟ್ಟಿಸಿದನೆಂದು ಅನೇಕ ಪ್ರಶ್ನೆಗಳಿವೆ. ಈ ಆಲೋಚನೆಗಳನ್ನು ಪರಿಗಣಿಸಿರಿ: (1) ಅಂಶವೇನೆಂದರೆ ಯೋಸೇಫನು ಈ ಒಂದು ರೂಡಿನಾಮ "ಅರಿಮಥಾಯದವನು" ಎಂದಿತ್ತು ಅವನು ಅಲ್ಲಿಯೆ ಇದ್ದನು ಎಂದು ಇದನ್ನು ಅರ್ಥಮಾಡಿಕೊಳ್ಳಬೇಕಿಲ್ಲ. (ಯೇಸು ಸಹ ಒಂದು ರೂಡಿ ಹೆಸರು "ನಜರೇತಿನವನು" ಆತನು ಅಲ್ಲಿ ಬಹಳ ವರ್ಷಗಳು ಇರಲಿಲ್ಲ ವಾದರು ಆ ಹೆಸರು ಇದೆ.) (2) ಯೆರೂಸಲೇಮಿನಲ್ಲಿ ಸಮಾದಿ ಮಾಡಿರುವದು ಕೆಲವು ಪ್ರತಿಷ್ಟೆ ಹೊಂದಿರುತ್ತದೆ. [25]ಯೋಹಾನ 19:42 ಮತ್ತು 20:13 ವಚನಗಳು ಈ ಸಮಾದಿ ತಾತ್ಕಾಲಿಕವಾಗಿತ್ತು ಎಂದು ಸೂಚಿಸಬಹುದು ಮತ್ತು ಯೋಸೇಫನು ಸಬ್ಬತ್ ಕಳೆದ ನಂತರ ಸರಿಯಾದ ಸ್ಥಳಕ್ಕೆ ಅದನ್ನು ಸ್ಥಳಾಂತರಿಸಲು ಯೋಜನೆ ಮಾಡಿದ್ದನು. ಆ ರೀತಿಯಲ್ಲಿ ಇರುವುದಾದರೆ ಕ್ರಿಸ್ತನ ಪುನರುತ್ಥಾನವು ಯೋಸೇಫನ ಯೋಜನೆಗಳನ್ನು ಅಪ್ರಸ್ತುತವಾಗುತ್ತದೆ. [26]ಯೋಹಾನ 19:40 ಮತ್ತು 20:5 ವಚನಗಳು "ನಾರು ಬಟ್ಟೆಗಳು" ಎಂದು ಹೇಳುತ್ತವೆ ("ಪ್ರೇತ ವಸ್ತ್ರಗಳು"; KJV). ಯೋಸೇಫನ ನಾರು ಬಟ್ಟೆಯನ್ನು ಕೊಂಡು ಕೊಂಡನು (ಮಾರ್ಕ 15:46) ಇದೆ ಉದ್ದೇಶಕ್ಕಾಗಿ ಅದನ್ನು ಬಣ್ಣ ಬಣ್ಣದ ಬಟ್ಟೆಯೆಂದು ಬದಲಾಯಿಸಿರಬಹುದು ಅಥವಾ ಬಣ್ಣ ಬಣ್ಣದ ಬಟ್ಟೆ ಬೇರೆ ಮೂಲದಿಂದ ಬಂದಿರಬಹುದು ಮತ್ತು ಈ ನಾರು ಬಟ್ಟೆಯನ್ನು ಸುಗಂಧ ತೈಲ ಹೆಚ್ಚುವದಕ್ಕಾಗಿ ಈ ಬಟ್ಟೆಯನ್ನು ಕೇವಲ ಆ ದೇಹ ಮರೆಮಾಡಲು ಹೊದಿಸಿರುತ್ತಾರೆ. [27]NASBಯಲ್ಲಿ "ಸುಮಾರು ನೂರು ಪೌಂಡ್ಸ್ ಬಾರ್" ಎಂದಿದೆ. ಆದರೆ ಗ್ರೀಕ್ ಮೂಲ ಪಠ್ಯದಲ್ಲಿ ಅದು ನೂರ ಲೀಟರ್ ಎಂದು ಇದೆ. ಅನೇಕ ಗ್ರಂಥಕರ್ತರು ಒಂದು ಲೀಟರ್ ಅದು ಸುಮಾರು ಹನ್ನೆರಡು ಜಾನ್ಸ್ ಆಗುತ್ತದೆ ಎಂದು ಯೋಚಿಸುತ್ತಾರೆ. ಇದೆ ಅಂಶ ಅಲ್ಲಿ ಇರುವುದಾದರೆ, ಒಂದು ನೂರು ಲೀಟರ್ ಅದು ಎಪ್ಪತ್ತು ಪೌಂಡ್ಸ್ ಆಗುತ್ತದೆ. NIV ಯಲ್ಲಿ ಎಪ್ಪತ್ತು ಪೌಂಡ್ಸ್ ಎಂದು ಹೇಳುತ್ತದೆ. ಇಷ್ಟೊಂದು ಮದುರವಾಗಿರುವದು ತುಂಬಾ ಬೆಲೆಬಾಳುವದು ಆಗಿರುತ್ತದೆ, ಯೋಸೇಪ ಮತ್ತು ನಿಕೋದೇಮನು ಶ್ರಿಮಂತರಾಗಿದ್ದರು ಎಂದು ಇದು ಸೂಚಿಸುತ್ತದೆ. ಜೋಯಿಸಲಿಂದ ರಕ್ತಬೋಳ ಕಾಣಿಕೆಯಾಗಿ ತೆಗೆದುಕೊಂಡು ಬಂದಿದ್ದರು. ಇದನ್ನು ಶಿಲುಬೆಗೆ ಹಾಕುವ ದುಷ್ಟರಿಗೆ ಮಧ್ಯದಲ್ಲಿ ಕಾಣಿಕೆಯಾಗಿ ತೆಗೆದುಕೊಂಡು ಉಪಯೋಗಿಸುತ್ತಿದ್ದರು ಅಗರ ಚಂದನ ಇದು ಹೂವಿನ ಸಸಿ ನಿಚ್ಛಳವಾದ ಎಲೆಗಳು ಇರುತ್ತವೆ. ನಾನಿರುವ ಸ್ಥಳದಲ್ಲಿ, ಈ ಎಲೆಗಳಿಂದ ಹುರಿಯುವ ಭಾಗಕ್ಕೆ ಅಥವಾ ತುರಿಕೆ ಇರುವ ಭಾಗದಲ್ಲಿ ಹಚ್ಚುವ ಮಲಾಮಿನೊಂದಿಗೆ ಸೇರಿಸುತ್ತಾರೆ. ಹೊಸ ಒಡಂಬಡಿಕೆಯ ಕಾಲದಲ್ಲಿ ಎಲೆಗಳನ್ನು ಒಣಗಿಸಿ ಪುಡಿ ಮಾಡುತ್ತಾರೆ. ಉದಾಹರಣೆಗೆ ರಕ್ತ ಬೋಳ ಮತ್ತು ಅಗರ ಚಂದನವನ್ನು ಸುಗಂಧವಾಸನಕ್ಕಾಗಿ ಉಪಯೋಗಿಸುತ್ತಿದ್ದರು (ಕೀರ್ತನೆ 45:8). [28]ಈ ಕಲ್ಲುಗಳು

ದೊಡ್ಡದಾಗಿ, ಚಪ್ಪಟೆಯಾಗಿ, ಮತ್ತು ಗುಂಡಾಗಿ ಇರುತ್ತದೆ (ದೊಡ್ಡ ಮೈಲಿಗಲ್ಲು ಅದರಲ್ಲಿ ಮಧ್ಯ ಚಿಕ್ಕ ಯಾವುದೇ ಬಿರುಕು ಇರುವುದಿಲ್ಲ), ಕಲ್ಲುಬಂಡೆಯಲ್ಲಿ ಕಾಲುವೆ ತೋಡಲು ಇದನ್ನು ಉರುಳಿಸುತ್ತಿದ್ದರು. ಇದನ್ನು ಸಾಮಾನ್ಯವಾಗಿ ಒರಗಿಸಿ ಇಡುತ್ತಿದ್ದರು ಅದರಿಂದ ಇದನ್ನು ಸಮಾದಿ ಮುಚ್ಚಲು ಉರುಳಿಸುತ್ತಿದ್ದರು ನಂತರ ಬೇರೆ ಕಡೆಗೆ ಉರುಳಿಸಿ ತೆಗೆಯುತ್ತಿದ್ದರು (ನೋಡಿರಿ ಮಾರ್ಕ 16:3). ಯೋಸೇಫನಿಗೆ ಈ ಕಲ್ಲನ್ನು ಉರುಳಿಸಲು ಸಹಾಯ ಬೇಕಾಗಿತ್ತು, ನಿಕೋದೇಮನು ಸಹಾಯಿಸಲು ಅಲ್ಲಿದ್ದನು. ಬಹುಶಃ ಅಲ್ಲಿ ಕೆಲವು ಆಳುಗಳು ಅಲ್ಲಿದ್ದಿರಬಹುದು. [29]ಯೋಸೇಫನಿಗೆ ಮತ್ತು ನಿಕೋದೇಮನಿಗೆ ಯೇಸುವಿನ ಪುನರುತ್ಥಾನವಾದ ನಂತರ ಏನಾಯಿತು? ಇವರಿಬ್ಬರು ಯೇಸುವನ್ನು ಸಮಾದಿ ಮಾಡಲು ಅನೇಕ ಅಪಾಯಗಳನ್ನು ಎದುರಿಸಿದರು ಎಂದು ನಿರೀಕ್ಷಿಸುತ್ತೇವೆ ಅವರು ಕ್ರೈಸ್ತರಾದರು, ನಂಬಿಕೆಯನ್ನು ಕಾಪಾಡುವ ಸ್ಪಷ್ಟ ಮಾತುಗಳನ್ನಾಡುವವರು ಆಗಿದ್ದರು - ಆದರೆ ಹೊಸ ಒಡಂಬಡಿಕೆ ಇದನ್ನು ಹೇಳುವುದಿಲ್ಲ. ನಂತರ ದಿನಗಳಲ್ಲಿ ಈ ಇಬ್ಬರ ಕುರಿತು ಅನೇಕ ಕಲ್ಪನಾ ದಂತ ಕಥೆಗಳನ್ನು ಆಲೋಚಿಸಿದರು. ಹೇಳಿದರು ಆದರೆ ಅದೇ ಅದೆಲ್ಲವುಗಳು ಕಥೆಗಳು: ದಂತ ಕಥೆಯಾಗಿದೆ. [30]ಸಲೋಮೆ (ಯಾಕೋಬ ಮತ್ತು ಯೋಹಾನ ತಾಯಿ) ಈ ಇಬ್ಬರು ಸ್ತ್ರೀಯರೊಂದಿಗೆ ಶಿಲುಬೆ ಬಳಿಯಲ್ಲಿ ಇದ್ದಳು (ಮಾರ್ಕ 15:40), ಆದರೆ ಈಕೆಯು ಅವರೊಂದಿಗೆ ಸಮಾದಿಗೆ ಹೋಗಲಿಲ್ಲ. ಬಹುಶಃ ಆಕೆಯು ತನ್ನ ಮಗನ ಮನೆಗೆ ಯೇಸುವಿನ ತಾಯಿ ಮರಿಯಳನ್ನೂ ಸಂತೈಸಲು ಹೋಗಿರ ಬಹುದು.

[31]B. S. Dean, “An Outline of New Testament History,” *Truth for Today* (March 1992): 30. [32]H. I. Hester, *The Heart of the New Testament* (Liberty, Mo.: Quality Press, 1963), 223. [33]ಈತನ ಕುರಿತು ನಾವು ಏನಾದ್ರು ಹೇಳಬಹುದು, ಪಿಲಾತನು ಎಲ್ಲಾ ಸಮಯದಲ್ಲಿ ಆತನೇ ದೊರಕುತ್ತಿದ್ದನು: ಪಿಲಾತನು ಬೆಳಗಿನ ಜಾವ ಯೆಹೂದ್ಯ ನಾಯಕರನ್ನು ಬೇಟಿಯಾದನು (ಮಾರ್ಕ 15:1) ಜನರೊಂದಿಗೆ ಇಡೀ ದಿನ (ಯೋಹಾನ 19:21, 31; ನೋಡಿರಿ 15:43), ಮತ್ತು ಈಗ ಆತನು ಕತ್ತಲಾದ ನಂತರ ಬೇಟಿಯಾಗುತ್ತಾನೆ. [34]“ಮೂರು ದಿನಗಳು” ಇದನ್ನು ಯೆಹೂದ್ಯರ ನಾಯಕರಿಂದ ಯೇಸುವನ್ನು “ಯೋನನ ಸೂಚನೆ” ಎಂದು ಸಂಪರ್ಕ ಕಲ್ಪಿಸುತ್ತಾರೆ (ಮತ್ತಾಯ 12:39, 40) ಮತ್ತು ದೇವಾಲಯದ ನಾಶನದ ಕುರಿತು ರಹಸ್ಯ ಹೇಳಿಕೆಗೆ ಈ ಮೂರು ದಿನಗಳನ್ನು ಸೂಚಿಸುತ್ತಾರೆ (ಯೋಹಾನ 2:19). ಯೇಸುವಿನ ಬೋಧನೆಯಿಂದ ಯೆಹೂದ್ಯ ನಾಯಕರು ಅನೇಕ ವಿಷಯಗಳು ಅವರು ಕಲಿತಿರುವ ಸಾಧ್ಯತೆಗಳಿವೆ. ಉದಾಹರಣೆಗೆ ಯೇಸು ಶಿಷ್ಯರಿಗೆ ಮಾತಾಡಿರುವದು ಯೆಹೂದ್ಯನಾಯಕರು ಕೇಳಿಸಿಕೊಂಡಿದ್ದರು ಅಥವಾ ಅವರಿಗೆ ಯೂದನು ಹೇಳಿರುತ್ತಾನೆ. [35]ಮೂರು ದಿನಗಳ ನಂತರ ಎನ್ನುವದರ ಅರ್ಥವು ನಾಯಕರು “ಮೂರನೆಯ ದಿನದವರೆಗೆ” ಎಂದು ತಿಳಿದು ಕೊಂಡಿದ್ದರು. ಯೇಸು ಮೂರು ದಿನ ಸಮಾದಿಯಲ್ಲಿ ಇದ್ದನು ಎಂದು ಅವರು ಯೋಚಿಸಿದ್ದರೆ, ಅವರು “ನಾಲ್ಕನೆ ದಿನದವರೆಗೆ” ಎಂದು ಹೇಳುತ್ತಿದ್ದರು ಇದರ ಮೇಲೆ ಮುಂದಿನ ಚರ್ಚೆಗೆ ಈ ಲೇಖನ ನೋಡಿರಿ “ಯಾವ ದಿನದಂದು ಯೇಸು ಮರಣ ಹೊಂದಿದನು?” ನಂತರ ಈ ಪುಸ್ತಕದಲ್ಲಿ ಕಂಡುಕೊಳ್ಳಿರಿ. [36]ಪುನರುತ್ಥಾನ ನಂತರ ಮುಖ್ಯಯಾಜಕರು ಅಲ್ಲಿ ಸಿಪಾಯಿಗಳಿಗೆ ಲಂಚವನ್ನು ಕೊಟ್ಟು ಸುಳ್ಳು ಹೇಳಲು ಸಿದ್ಧಮಾಡಿದರು (ಮತ್ತಾಯ 28:11-13). ಈ ಸುದ್ದಿ ದೇಶಾಧಿಪತಿಯ ಕಿವಿಗೆ ಬಿದ್ದರೆ ನಾವು ಅವನನ್ನು ಸಮಾಧಾನ ಪಡಿಸಿ ನಿಮಗೆ “ಭಯವಿಲ್ಲದ” ಹಾಗೆ ಮಾಡುತ್ತವೆ ಅಂದರು (ಮತ್ತಾಯ 28:14). ರೋಮನ್ ಸಿಪಾಯಿಗಳಿಗೆ ಅಲ್ಲಿರುವ ಕಟ್ಟುಪಾಡುಗಳಿಂದ ಅವರಿಗೆ ಆಪತ್ತು ಭಯವುಂಟಾಯಿತು ಆದರೆ ಯೆಹೂದ್ಯ ಸಿಪಾಯಿಗಳಿಗೆ ಯಾವ ಭಯವಿರಲಿಲ್ಲ (ಫೋಸ್ಟರ್, 1310). [37]ಇದರ ಕುರಿತಾಗಿ ಅವರು ನಿಶ್ಚಿತ ಮಾಡದಿದ್ದರೆ, ಇಡಿ ಈ ಕಾರ್ಯದಲ್ಲಿ ಯಾವ ಅಂಶವು ಇರುವುದಿಲ್ಲ (Ibid., 1311). [38]Richard Rogers, *ಕ್ರಿಸ್ತನ ಜೀವನ ಚರಿತ್ರೆ* ಮತ್ತು ಆತನ *ಬೋದನೆಗಳು* (Lubbock, Tex.: Sunset International Bible Institute External Studies Department, 1995), 101. [39]ಅಲ್ಲಿ ಎಷ್ಟು ಜನ ಸಿಪಾಯಿಗಳು ನೇಮಿಸಿದರು ಎಂದು ನಾವು ವಿವರವಾಗಿ ಹೇಳುವುದಿಲ್ಲ. ಅಲ್ಲಿ ಒಬ್ಬನು ಮಾತ್ರ ಇರಲಿಲ್ಲ ಎಂಬುದು ಗೊತ್ತಿದೆ (ಮತ್ತಾಯ 28:4); ಇಬ್ಬರಿಗಿಂತ ಹೆಚ್ಚಾಗಿದ್ದರು ಎಂಬುದು ಸಹ ಗೊತ್ತಿದೆ (ಮತ್ತಾಯ 28:11). ನಾಲ್ಕು ಜನರು ಸಿಪಾಯಿಗಳು ಯೇಸುವಿನ್ನು ಶಿಲುಬೆಗೆ ಹಾಕುವ ಕಾರ್ಯಕ್ಕೆ ನೇಮಿಸಲಾಗಿತ್ತು (ಯೋಹಾನ 19:23); ಬಹುಶಃ ಅನೇಕರನ್ನು ಆ ಕೆಲಸಕ್ಕೆ ನೇಮಿಸಿರಬಹುದು. ಇದು ನಾಲ್ಕು ದಿನಗಳ ಕೆಲಸವಾಗಿದ್ದರಿಂದ ನಾಲ್ಕು ಜನರ ಗುಂಪು, ನಾಲ್ಕು ಗುಂಪುಗಳನ್ನು ಮಾಡಿ ಪುನರಾವರ್ತನೆ ಮಾಡಿರುವ ಸಾಧ್ಯತೆಗಳಿವೆ ಪೇತ್ರನು ಸೆರೆಯಲ್ಲಿರುವವಾಗ ಅದೇ ರೀತಿ ಕಾಯ್ದರು (ಅಪೊಸ್ತಲರ ಕೃತ್ಯಗಳು 12:4). [40]John Franklin Carter, *A Layman's Harmony of the Gospels* (Nashville: Broadman Press, 1961), 342.


[41]ಮಾರ್ಕ 16:9 ಇದು ಮಾರ್ಕನ ಸುವಾರ್ತೆಯ ಮುಕ್ತಾಯದ ಭಿನ್ನಭಿಪ್ರಾಯ ನಂತರ

ಚರ್ಚಿಸಲಾಗಿದೆ. ಹೆಚ್ಚಿನ ಜನರು ಅದನ್ನು ಒಪ್ಪುತ್ತಾರೆ, ಹಾಗಿದ್ದರೂ, ಮಾರ್ಕ 16:9 ಮುಂಚಿತವಾಗಿ ಇರುವ ಸಭೆಗಳು ಏನು ಅರ್ಥಮಾಡಿಕೊಂಡಿದ್ದರು ಮತ್ತು ನಂಬಿದ್ದರು ಎನ್ನುವ ಹೇಳಿಕೆಯನ್ನು ಪ್ರತಿನಿಧಿಸುತ್ತದೆ. ಯೇಸು ವಾರದ ಮೊದಲಿನ ದಿನ ಎದ್ದು ಬಂದವನು ಎನ್ನುವ ವಿಷಯ ಕ್ರೈಸ್ತ ನಂಬಿಕೆಗೆ ಕೇಂದ್ರಬಿಂದುವಾಗಿದೆ. ಹಳೆ ಒಪ್ಪಂದಂತೆ ಎಳನೆಯ ದಿನ "ವಿಶೇಷ" ದಿನ ಸಬ್ಬತ್ ಆಗಿತ್ತು (ವಿಮೋಚನಕಾಂಡ 20:8-11). ಹೊಸ ಒಪ್ಪಂದದಂತೆ "ವಿಶೇಷ" ದಿನ ಅದು ವಾರದ ಮೊದಲನೆಯ ದಿನ "ಕರ್ತನ ದಿನ" (ಪ್ರಕಟಣೆ 1:10). ಆ ದಿನದಲ್ಲಿ, ಮುಂಚೆ ಇರುವ ಸಭೆ ಆರಾಧನೆಗೆ ಸೇಲಿಬಂದರು (1 ಕೊರಿಂಥ 16:1, 2; ಅಪೊಸ್ತಲರ ಕೃತ್ಯಗಳು 20:7). [42]ಅನೇಕ ಬರಹಗಾರರು ಮತ್ತಾಯ 28:1-8ರಲ್ಲಿ ಬರೆದಿರುವದು ದೇವದೂತರು ಆ ಕಲ್ಲನ್ನು ಆ ಸ್ತ್ರೀಯರು ಸಮಾದಿಗೆ ಬರುವ ಮಾರ್ಗದಲ್ಲಿ ಬರುತ್ತಿರುವಾಗ ಉರುಳಿಸಿದರು ಎನ್ನುವಂಥದ್ದನ್ನು ಸೂಚಿಸುತ್ತದೆ ಎಂದು ನಂಬಿದರು - ಮತ್ತು ಸಮಾದಿ ತೆರೆಯುವದಕ್ಕಿಂತ ಮುಂಚೆ ಯೇಸು ಎದ್ದು ಬಂದನು. ಈ ಮುಕ್ತಾಯ ಸರಿ ಇರುವುದಾದರೆ, ನಂತರ, ಪುನರುತ್ಥಾನವು ಅತ್ತಿರದಲ್ಲಿಯೇ ಮೊದಲಿನ ದಿನ ಪ್ರಾರಂಭವಾಗುವದಕ್ಕಿಂತ ಸ್ವಲ್ಪ ಮುಂಚೆ ಆಗಿರುತ್ತದೆ. [43]ಲೂಕ 23:43ರ ಮೇಲಿನ ವ್ಯಾಖ್ಯಾನ ನೋಡಿರಿ ಅದನ್ನು "ರೋಮಾಯರ ಶಿಲುಬೆಯಲ್ಲಿ ಆರು ಘಂಟೆಗಳು" ಎನ್ನುವ ಅಧ್ಯಾಯದಲ್ಲಿ ಕಾಣುತ್ತೇವೆ. [44]ಇದು ಶರೀರದಲ್ಲಿ ಜೀವಿಸುವವರು ಕ್ರಿಸ್ತನು ಯಾವಾಗ ಬರುತ್ತಾನೋ ಆಗ ಈ ಶರೀರವುಳ್ಳ ಈ ದೇಹಗಳನ್ನು ಆತ್ಮೀಕ ದೇಹಗಳನ್ನಾಗಿ ಬದಲಾಯಿಸುತ್ತಾನೆ (1 ಕೊರಿಂಥ 15:50-53; ನೋಡಿ ವಚನಗಳು 42-44). ಯೇಸುವಿನ ದೇಹಕ್ಕೆ ಈ ರೀತಿಯ ಸಮಾನಾಂತರ ಕಾರ್ಯಗಳು ನೆರವೇರಿದವು (ಈಗ ಬೀಗ ಹಾಕಿದ್ದ ಬಾಗಿಲೊಳಗಿಂದ ಹೋಗಬಹುದು; ಯೋಹಾನ 20:19; NIV). ಯೇಸುವಿನ ಪುನರುತ್ಥಾನ" ಇದನ್ನು ಈ ಪುಸ್ತಕದಲ್ಲಿ ಕಾಣುತ್ತೇವೆ. [45]Robert Duncan Culver, *The Life of Christ* (Grand Rapids, Mich.: Baker Book House, 1976), 267. [46]ಪುನರುತ್ಥಾನದ ಕುರಿತು ಹೆಚ್ಚಿನ ಆಧಾರ ವಾಕ್ಯಗಳು ಹೇಳುವದೆಂದರೆ ಯೇಸು "ಎದಿದ್ದಾನೆ" (ಯೋಹಾನ 2:22; 21:14; ರೋಮಾಪುರ 4:25; 6:4; 8:34ಣಿ 1 ಕೊರಿಂಥ 15:4). ಒತ್ತಿ ಹೇಳಿದ್ದೇನೆಂದರೆ "*ದೇವರು* ಆತನನ್ನು ಎಬ್ಬಿಸಿದನು" (ಅಪೊಸ್ತಲರ ಕೃತ್ಯಗಳು 2:24; ಒತ್ತಿ ಹೇಳಿದ್ದು ನನ್ನದು). ತನ್ನ ಸ್ವಂತ ಪುನರುತ್ಥಾನದಲ್ಲಿ ಆತನು ಕ್ರಿಯಾ ಸ್ವರೂಪನಾಗಿದ್ದನು ಆತನು ನಿಷ್ಕ್ರಿಯವಾಗಿರಲಿಲ್ಲ ಎಂಬ ಅಭಿಪ್ರಾಯ ಹೊಂದಿದ್ದನು (ಯೋಹಾನ 10:17, 18). ಪುನರುತ್ಥಾನದ ಕಾರ್ಯದಲ್ಲಿ ಪವಿತ್ರಾತ್ಮನ ಪ್ರಸನ್ನತೆಯಿತ್ತು ಎಂದು ಪೌಲನು ಅಭಿಪ್ರಾಯ ಹೊಂದಿದ್ದಾನೆ (ರೋಮಾಪುರ 8:11; 1:4). ಈ ಹೇಳಿಕೆಗೆ ಯಾವುದೇ ವಿರೋಧ ಪ್ರತಿಕ್ರಿಯೆ ಇಲ್ಲ, ಒಬ್ಬ ದೇವರ ಮುಂದೂತನು ಮಾಡಿದನು ಅದನ್ನು ಎಲ್ಲರು ಮಾಡಲು ಹೇಳುತ್ತಾರೆ. [47]ಯೇಸುವಿನ ದೇಹಕ್ಕೆ ಸುತ್ತಿದ ಬಟ್ಟೆಯನ್ನು ತೋಟದಯಲ್ಲಿ ಸಮಾದಿಯಲ್ಲಿ ಯಾರು ಇರಲಿಲ್ಲ (ಯೋಹಾನ 11:44), ಯೇಸುವಿನ ಬದಲಾದ ದೇಹವು ಕಟ್ಟಲ್ಪಡುವಿಕೆಯಿಂದ ಮತ್ತು ಮುಚ್ಚಿದ ಬಾಗಿಲುಗಳಿಂದ ಹೊರಗಡೆ ಹೋದನು ಎಂದು ನಾವು ಅಭಿಪ್ರಾಯ ಸ್ವೀಕರಿಸಬೇಕು (ಯೋಹಾನ 20:19, 26; NIV). ಆತನ ಪುನರುತ್ಥಾನದ ಕುರಿತು ಹೆಚ್ಚಾಗಿ ನಮಗೆ ಗೊತ್ತಿಲ್ಲ! ನಮ್ಮ ಪ್ರಶ್ನೆಗಳಿಗೆ ಉತ್ತರವು ನಮ್ಮ ಆತುರಕ್ಕೆ ತೃಪ್ತಿಕೊಡಬಹುದು, ಆದರೆ ಅವೆಲ್ಲವು ನಮ್ಮ ನಂಬಿಕೆಗೆ ಸೇರಿಸಲ್ಪಡುವುದಿಲ್ಲ - ಅದರಿಂದ ದೇವರು ನಮಗೆ ಅಂಥಹ ಉತ್ತರಗಳು ಕೊಡಲಿಲ್ಲ. [48]Peter Marshall, *The First Easter*, ed. Catherine Marshall (New York: McGraw-Hill Co., 1959), 128–29. [49]ಯೇಸು ಸಮಾದಿಯಿಂದ ಹೊರಗೆ ಬರುತ್ತಿದ್ದಂತೆಯೇ ಅದರ ವಿಷಯದಲ್ಲಿಯೇ ವರ್ಣಿಸಿದ್ದಾನೆ. ಬಣ್ಣಿಸಿದ್ದಾನೆ ಆದರೆ ಅದರರ್ಥವು ಆತನ ಮೊದಲನೆಯ ದರ್ಶನವು ಕಾಣಿಸಿಕೊಳ್ಳುವಿಕೆಯು ಅಪನಂಬಿಕೆಯ ಸಿಪಾಯಿಯೊಂದಿಗೆ ಸುವಾರ್ತೆಯ ಪ್ರಕಾರ, ಆತನು ಮೊದಲನೆಯದಾಗಿ ಮಗ್ದಲದ ಮರಿಯಳಿಗೆ ಕಾಣಿಸಿಕೊಂಡನು (ಮಾರ್ಕ 16:9; ಯೋಹಾನ 20:1-18). [50]ಕೆಲವು ಸಿಪಾಯಿಗಳ ಅಲ್ಲಿಂದ ಹೋಗುವಾಗ ಏನು ಮಾಡಿದರು ಎಂಬುದು ಮತ್ತಾಯ 28:11-15ರಲ್ಲಿ ದಾಖಲಿಸಿದೆ. ಅದನ್ನು ಮುಂದಿನ ಪಾಠದಲ್ಲಿ ಅಭ್ಯಾಸ ಮಾಡುತ್ತೇವೆ.

[51]ಹಿಂದಿನ ಭಾಷಾಂತರಗಳು "ಸಬ್ಬತ್ತ್ ದಿನದ ಅಂತ್ಯದಲಿ" ಎಂದು ಇದೆ (ನೋಡಿರಿ KJV) ಅನೇಕ ಕಾರಣಗಳು ಅಂಶಗಳು ಒಳಗೊಂಡು ಒಂದು ಅಧಿಕ ಸಬ್ಬತ್ ಒಳಗೊಂಡಿದೆ ಅದನ್ನು ಇಬ್ಬರು ಮರಿಯಳರಿಂದ ಇಂದಿಗೂ ಮುಚ್ಚಿರುವ ಸಮಾದಿಯನ್ನು ಬೇಟಿ ಮಾಡಲ್ಪಟ್ಟಿತು. ಎಂದು ಅನೇಕ ಭಾಷಾಂತಕಾರರು "ಸಬ್ಬತ್ತ್ ದಿನದ ನಂತರ" ಎಂದೆ ನಂಬಿದ್ದಾರೆ ಅದು ಸರಿಯಾದದ್ದೆ ಆಗಿದೆ (ನೋಡಿರಿ NKJV, NASB, ಮತ್ತು NIV). [52]ಗಲಿಲಾಯದಲ್ಲಿ ಯೇಸುವಿಗೆ ಸೇವೆ ಮಾಡಿದವರು ಅನೇಕ ಸ್ತ್ರೀಯರಲ್ಲಿ ಯೋಹಾನಳು ಒಬ್ಬಳಾಗಿದ್ದಳು (ಲೂಕ 8:3). ಈ ಅಧ್ಯಾಯದ ಎರಡನೆ ಭಾಗದಲ್ಲಿ ನೋಡುತ್ತೇವೆ, ಮಗ್ದಲದ ಮರಿಯಳು ಸಮಾದಿಗೆ ಮುಟ್ಟಿದ ನಂತರ, ಆಕೆಯು ಪೇತ್ರ ಮತ್ತು ಯೋಹಾನನನ್ನು ಬೇಟಿಯಾಗಲು ಓಡಿ ಹೋದಳು. ದೇವದೂತನು ಅಲ್ಲಿ ಮಾತನಾಡುವಾಗ ಇತರ ಸ್ತ್ರೀಯರೊಂದಿಗೆ ಈಕೆ ಇರಲಿಲ್ಲ. [53]ಮಗ್ದಲದ ಮರಿಯಳು ಈ ವಿಚಾರವನ್ನು ತಿಳಿಸಲು ಪೇತ್ರ ಹಾಗೂ

ಯೋಹಾನರ ಬಳಿ ಓಡಿದಳು, ಆಗ ಇತರೆ ಸ್ತ್ರೀಯರು ಆಕೆಯೊಂದಿಗೆ ಇರಲಿಲ್ಲ. [54]ಅಲ್ಲಿ ಅವರು "ಸುತ್ತುವ ನಾರು ಬಟ್ಟೆಗಳು" ನೋಡಿರಬಹುದು (ಯೋಹಾನ 20:5). ಆದರೆ ದೇಹಕ್ಕೆ ಸುತ್ತಿರಲಿಲ್ಲ. [55]ಸುವಾರ್ತೆ ಪ್ರಕಾರವಾಗಿ ಈ ವಿಷಯಗಳು, ಒಂದು ಸುವಾರ್ತೆ ಹೇಳುತ್ತದೆ ಅಲ್ಲಿ ಇಬ್ಬರು "ಮನುಷ್ಯರ" ಇದ್ದರು (ಲೂಕ 24:4) ಇತರರು ಹೇಳುತ್ತಾರೆ. ಅಲ್ಲಿ ಕೇವಲ ಒಬ್ಬನೇ ಇದ್ದನು (ಮಾರ್ಕ 16:5; ಮತ್ತು 28:5). ಇಬ್ಬರಿಗೋಸ್ಕರ ಒಬ್ಬನು ಹೇಳುವವನಾಗಿದ್ದನು ಎಂದು ಕಾಣುತ್ತದೆ. [56]ಆತನು ಏನು "ಹೇಳಿದನು" ಎನ್ನುವ ವಿಚಾರಕ್ಕಾಗಿ ನೋಡಿರಿ ಮತ್ತಾಯ 16:21; 17:23; 20:19; 26:32 ಇದರ ಮೊದಲಿನ ಎರಡು ವಾಕ್ಯಗಳು ಸಹ ದೇವದೂತರ ಹೇಳಿಕೆಗಳಿಗೆ ಅಳವಡಿಕೆಯಾಗುತ್ತವೆ ಲೂಕ 24:6, 7ಕ್ಕೆ ಸಮಾನವಾಗಿದೆ. [57]ಯೇಸು ಮೊದಲೆ ವಾಗ್ದಾನ ಮಾಡಿ ತನ್ನ ಶಿಷ್ಯರನ್ನು ಗಲಿಲಾಯದಲ್ಲಿ ಕಾಣುತ್ತೇನೆ ಎಂದು ಹೇಳಿದನು (ಮತ್ತಾಯ 26:32), ಈ ಕೂಡುವಿಕೆಗೆ ಒಂದು ಸ್ಥಳವನ್ನು ಗೊತ್ತುಮಾಡಿದನು - ಒಂದು ಬೆಟ್ಟ (ಮತ್ತಾಯ 28:16), ಅಂಶವೇನೆಂದರೆ ನಂತರದಲ್ಲಿ ತನ್ನ ಶಿಷ್ಯರು ಆತನನ್ನು ಗಲಿಲಾಯದಲ್ಲಿ ನೋಡುವರು ಆರಿಸಿಕೊಂಡ ಕೆಲವರು ಸಹ ಆತನನ್ನು ಬೇಗ ನೋಡುವರು ಎನ್ನುವ ಸಾಧ್ಯತೆ ತೆಗೆದುಹಾಕುವದಕ್ಕೆ ಆಗುವುದಿಲ್ಲ. [58]ಕೆಲವು ಸ್ಥಳಗಳಲ್ಲಿ ಯೇಸು ಈ ಸ್ತ್ರೀಯರಿಗೆ ಕಾಣಿಸಿಕೊಂಡನು (ಮತ್ತಾಯ 28:9, 10), ಆದರೆ ಅವರು ಶಿಷ್ಯರನ್ನು ನೋಡಲು ಹೋಗುವ ಮಾರ್ಗದಲ್ಲಿ ಕಾಣಿಸಿದನೋ ಅಥವಾ ಅವರು ಬಿಟ್ಟು ಹೋಗುವಾಗ ಕಾಣಿಸಿದನೋ ನಮಗೆ ಗೊತ್ತಿಲ್ಲ. ಹೆಚ್ಚಿನ ಮಾಹಿತಿಗಾಗಿ, ಈ ಅಧ್ಯಾಯ ನೋಡಿರಿ ನಂತರ ಈ ಪುಸ್ತಕದಲ್ಲಿ ಕಾಣುವಿರಿ. [59]"ಏನು ಹೇಳಲಿಲ್ಲ" ಮಾರ್ಕ 16:8 ಮತ್ತು "ತಿಳಿಸಿದರು" ಲೂಕ 24:9 ಇವೆರಡನ್ನು ಸಮರಸಗೊಳ್ಳುವ ಸರಳವಾದ ಮಾರ್ಗವಿದೆ ಅದೇನೆಂದರೆ ದೇವದೂತರ ಕಳುಹಿಸಿದ ಹೊರತು ಅವರು ಯಾರಿಗೂ ಏನು ಹೇಳಲಿಲ್ಲ. [60]"ಹನ್ನೊಂದು" ಎಂದು ಆ ಸಮಯದಲ್ಲಿ ಸೂಚಿಸಲಾಗಿದೆ (ಯೂದನ ಬದಲಿಗೆ ತೆಗೆದುಕೊಳ್ಳುವ ಮೊದಲು) "ಹನ್ನೆರಡು" (ಮಾರ್ಕ 14:17) ಪೂರ್ವದಲ್ಲಿ ಸಾಮಾನ್ಯವಾಗಿ ಅವರನ್ನು "ಅಪೊಸ್ತಲರು" ಎಂದು ಗುರುತಿಸಲ್ಪಟ್ಟರು.

[61]ಕ್ಲೆಯೋಫಸ್ ಎನ್ನುವವರು ಸ್ತ್ರೀಯರು ಶಿಷ್ಯರಿಗೆ ಬಂದು ಹೇಳುವಾಗ ಸಹಜವಾಗಿ ಅವರು ಅಲ್ಲಿದ್ದರು (ಲೂಕ 24:22, 23). "ನಮ್ಮ ಸಂಗಡ ಇದ್ದವರಲ್ಲಿ ಕೆಲವರು ಸಮಾಧಿಗೆ ಹೋಗಿ ಆ ಸ್ತ್ರೀಯರು ಹೇಳಿದ ಪ್ರಕಾರವೇ ಕಂಡರು. ಆತನನ್ನು ಮಾತ್ರ ಕಾಣಲಿಲ್ಲ" (ಲೂಕ 24:24). ಇದರ ಅರ್ಥವು ಸ್ತ್ರೀ ಹೇಳಿದ ವಿಷಯ ಅವರು ಬಿಟ್ಟಿರ ಬಹುದೆಂದು ಮತ್ತು ಅವರು ಸಮಾಧಿಗೆ ಹೋಗಿದ್ದರು ಎನ್ನುವ ವಿಷಯ ಬಿಟ್ಟಿರಬಹುದು, ಆದರೆ ಇದು ಪೇತ್ರ ಮತ್ತು ಯೋಹಾನರು ಖಾಲಿಯಾದ ಸಮಾಧಿಗೆ ಮಾಡಿದ ಪ್ರಯಾಣವೆಂದು ಲೂಕನ ಸಾರಾಂಶವಾಗಿದೆ (ಯೋಹಾನ 20:1-10). [62]Hester, 225.


ಯೇಸು
ದಿನಗಳಲ್ಲಿ ಇದ್ದ
ಪಾಲೇಸ್ತಾನ
ಹೆರ್ಮೋನ್ ಬೆಟ್ಟ
ಕೈಸರೆಯ
ಗಲಿಲಾಯ
ಕಪೆರ್ನೌಮು
ಹಾರ್ಸ್ ಮತ್ತು ಹತ್ತಿನ್
ಗಲಿಲಾಯ ಸಮುದ್ರ
ತಾಬೋರ್ ಪರ್ವತ
ದೆಕೊಪೊಲ್ಯ
ಸಮಾರ್ಯ
ಯೊರ್ದನ್ ನದಿ
ಮಹಾ ಸಮುದ್ರ
ಅರಿಮಾತ್ಯ?
ಇಮ್ಮೌಸ್?
ಯೆರೂಸಲೇಮ
ಎಣ್ಣೆ ಮರಗಳ ತೋಟ
ಬೇಥಾನ್ಯ
ಮೃತ ಸಮುದ್ರ
ಯೂದಾಯ